# 1:24-29

# ಕೊಲೊಸ್ಸೆಯವರಿಗಾಗಿ ಪೌಲನ ಪ್ರಯಾಸಗಳು

ಪೌಲನು ಕ್ರಿಸ್ತನಿಗೆ ವೈಯಕ್ತಿಕ ಸೇವೆಯನ್ನು ಮಾಡುವದರಲ್ಲಿ ಆತನು ವಿರೋಧ ಮತ್ತು ಹಿಂಸೆಯನ್ನು ಎದುರಿಸುವದು ಅಗತ್ಯವಾಗಿತ್ತು. ಆತನ ಸಂದೇಶವು ಏನಾಗಿತ್ತೆಂದರೆ ದೇವರ ಹಿಂದಿನ ಕಾಲದ ಮರ್ಮವು ಈಗ ಪ್ರಕಟಗೊಳಿಸಲ್ಪಟ್ಟಿದೆ ಎಂಬದೆ: ಅನ್ಯಜನರಿಗೆ ಈಗ ಕ್ರಿಸ್ತನು ಅವರಲ್ಲಿರುವ ಮೂಲಕವಾಗಿ ಪ್ರಭಾವದ ನಿರೀಕ್ಷೆಯು ಇರುತ್ತದೆ. ಪೌಲನ ಪ್ರಯಾಸದ ಉದ್ದೇಶವು ಪ್ರತಿಯೊಬ್ಬ ವ್ಯಕ್ತಿಯನ್ನು ಆತನಲ್ಲಿ ಪ್ರವೀಣನ್ನಾಗಿ ಮಾಡುವದೇ ಆಗಿತ್ತು.

## ಆತನ ಸಂತೋಷ: ಅವರ ನಿಮಿತ್ತವಾಗಿ ಬಾಧೆಗಳನ್ನು ಅನುಭವಿಸುವದು (1:24)

**[24]. . . ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ.**

**"ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು"**

ಪೌಲನು **ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು** ಎಂದು ಬರೆಯುತ್ತಾನೆ. ಆತನು ತನ್ನ ಸಾಕ್ಷಿಯಾಗಿ ಬಾಧೆಯನ್ನು ಅನುಭವಿಸುವನೆಂಬುದನ್ನು ಯೇಸು ಆತನಿಗೆ ತೋರಿಸಿ ಕೊಟ್ಟಿದ್ದನು (ಅಪೊಸ್ತಲರ ಕೃತ್ಯಗಳು 9:16). ಬಾಧೆಯನ್ನು ಅನುಭವಿಸುವದು ಅಹಿತಕರವಾದದ್ದು. ಒಬ್ಬ ತಾಯಿಯ ನೋವು ಪ್ರಸವದ ಸಮಯದಲ್ಲಿ ಬಹಳ ಘೋರವಾಗಿರುತ್ತದೆ, ಆದರೆ ಆಕೆಯು ತನ್ನ ಮಗು ಲೋಕದೊಳಗೆ ಬರುತ್ತದಲ್ಲಾ ಎಂದು ಸಂತೋಷ ಪಡಬಲ್ಲಳು (ಯೋಹಾನ 16:21). ಪೌಲನಿಗೆ ಬಾಧೆಗಳಲ್ಲಿ ಸುಖವೇನೂ ಇರಲಿಲ್ಲ, ಆದರೆ ಅದು ಕೊಲೊಸ್ಸೆಯವರಿಗೆ ಉಂಟು ಮಾಡಬಹುದಾಗಿದ್ದ ಪ್ರಯೋಜನಕ್ಕೋಸ್ಕರ ಸಂತೋಷ ಪಟ್ಟನು. ಆತನು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಲ್ಲಿ ಸಹ ಇದೇ ಯೋಚನೆಯನ್ನು ವ್ಯಕ್ತಪಡಿಸುತ್ತಾ, ತಾನು ಅವರಿಗೋಸ್ಕರ

ಯಜ್ಞವಾಗಿ ಅರ್ಪಿತವಾಗಬೇಕಾದರೂ ತನಗೆ ಸಂತೋಷ ಎಂಬದಾಗಿ ಹೇಳುತ್ತಾನೆ (ಫಿಲಿಪ್ಪಿ 2:17). ಬಾಧೆಗಳಲ್ಲಿ ಸಂತೋಷ ಪಡುವದನ್ನೇ ಯೇಸು ತನ್ನ ಹಿಂಬಾಲಕರಿಂದ ಎದುರುನೋಡುವ ಕಾರ್ಯವಾಗಿರುತ್ತದೆ (ಮತ್ತಾಯ 5:10-12; ನೋಡಿರಿ ಅಪೊಸ್ತಲರ ಕೃತ್ಯಗಳು 5:41; 16:25; ಯಾಕೋಬ 1:2). ಶಿಲುಬೆಯ ಮೇಲೆ ತಾನು ಹೊಂದಿದ ಮರಣದ ವಿಷಯದಲ್ಲಿ ಯೇಸುವಿನ ದೋರಣೆಯು ಇದೇ ಆಗಿತ್ತು (ಇಬ್ರಿಯ 12:2).

ಪೌಲನು ಕೊಲೊಸ್ಸೆಯವರಿಗೋಸ್ಕರ ಯಾವ ವಿಧದಲ್ಲಿ ಬಾಧೆಯನ್ನು ಅನುಭವಿಸುತ್ತಿದ್ದನು? ಆತನು ಅದನ್ನು ವಿವರಿಸಲಿಲ್ಲ. ಪೌಲನು ಅನುಭವಿಸುತ್ತಿದ್ದ ಹಿಂಸೆಯ ಕುರಿತ ವರದಿಗಳು ಬಹುಶಃ ಅವರಿಗೆ ತಲುಪಿದ್ದಿರಬೇಕು. ಆತನ ಬಾಧೆಗಳು ಆತನನ್ನು ಕ್ರಿಸ್ತನಿಗಾಗಿ ಒಬ್ಬ ನಾಯಕನೆಂದು ಸಾಭಿತುಪಡಿಸಿರಬಹುದಾಗಿದೆ. ಆತನ ಸಂಗಡಿಗರು ಯಾವಾಗಲೂ ಆತನ ಜೊತೆಯಲ್ಲಿ ಹಿಂಸೆಯನ್ನು ಅನುಭವಿಸಿದವರಾಗಿರಲಿಲ್ಲ, ಬಹುಶಃ ಅದಕ್ಕೆ ಕಾರಣವೆಂದರೆ ಅವರು ಸುವಾರ್ತೆಯನ್ನು ಸಾರುವದರಲ್ಲಿ ಆತನಷ್ಟು ಧೈರ್ಯಶಾಲಿಗಳಾಗಿರಲಿಲ್ಲ ಅನ್ನಿಸುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 14:19, 20). ಆತನು ಸಹೋದರರ ಮಧ್ಯದಲ್ಲಿ ಒಬ್ಬ ಅಪೊಸ್ತಲನಾಗಿ ಮತ್ತು ನಾಯಕನಾಗಿ ಬಾಧೆಯನ್ನನುಭವಿಸಿದ್ದರಿಂದಾಗಿ, ಅವರು ಆತನನ್ನು ಕ್ರಿಸ್ತನ ನಿಜವಾದ ಪ್ರತಿನಿಧಿ, ಅಪೊಸ್ತಲಿಕ ಅಧಿಕಾರವನ್ನು ಹೊಂದಿರುವವನೆಂದು ಗುರುತಿಸುವಂತಾಗಿತ್ತು. ಅಲ್ಲದೆ, ಕಠಿಣ ಹಿಂಸೆಯ ಮಧ್ಯದಲ್ಲಿ ಯೇಸುವಿಗಾಗಿ ನಿಷ್ಠಾವಂತರಾಗಿ ಉಳಿಯುವಂತೆ ಆತನ ಉದಾಹರಣೆಯು ಅವರನ್ನು ಪ್ರೋತ್ಸಾಹಿಸುವದಾಗಿತ್ತು.

ಪೌಲನನ್ನು ಅನೇಕ ಕಣ್ಣುಗಳು ನಂಬಿಕೆಯಲ್ಲಿ ಒಬ್ಬ ನಾಯಕನಾಗಿ ನೋಡುತ್ತಿದ್ದವು, ಮತ್ತು ಆತನಿಗೆ ಅದರ ಗ್ರಹಿಕೆಯಾಗಿದ್ದಿರಬಹುದಾಗಿದೆ. ಧೈರ್ಯವಂತ ಮತ್ತು ಸಹಿಸಿಕೊಳ್ಳುವವನಾಗಿ ಇರುವ ಮೂಲಕ, ಸುವಾರ್ತೆಗಾಗಿ ಆತನು ಏನೆಲ್ಲಾ ಅನುಭವಿಸುತ್ತಿದ್ದಾನೆಂಬದನ್ನು ತಿಳಿದುಕೊಂಡಂಥ ಎಲ್ಲರಿಗೂ ಆತನೊಂದು ಮಾದರಿಯನ್ನು ತೋರಿಸಿದನು. ಆತನು ಸಂಕಷ್ಟಗಳಲ್ಲಿ ಬಿದ್ದುಹೋಗುವದಾದಲ್ಲಿ, ಅನೇಕರು ನಿರಾಶೆಗೊಳ್ಳಬಹುದಾಗಿತ್ತು ಮತ್ತು ನಂಬಿಕೆಯಿಂದ ತೊಲಗಿ ಹೋಗಬಹುದಾಗಿತ್ತು. ಆತನ ಉತ್ತಮ ಉದಾಹರಣೆಯು ಅತ್ಯಂಥ ಕಠಿಣ ಪರಿಸ್ಥಿತಿಗಳಲ್ಲಿ ಕ್ರಿಸ್ತನನ್ನು ಗಟ್ಟಿಯಾಗಿ ಹಿಡಿದುಕೊಳ್ಳುವಂತೆ ಇತತರಿಗೆ ಪ್ರೋತ್ಸಾಹಗೊಳಿಸುವದಾಗಿತ್ತು. "ಅನೇಕ ಕಷ್ಟದ ಪರಿಸ್ಥಿತಿಗಳ ಮಧ್ಯದಲ್ಲಿಯೂ ಆತನು ತೋರಿದ ಸ್ಥೈರಣೆಯು ಕೊಲೊಸ್ಸೆಯವರನ್ನು, ಮತ್ತು ಎಲ್ಲೆಡೆಯೂ ಇರುವಂಥ ವಿಶ್ವಾಸಿಗಳನ್ನು ಅವರ ನಂಬಿಕೆಯಲ್ಲಿ ಬಲಪಡಿಸುವದಿಲ್ಲವೋ?"[1] ಎಂದು William Hendriksen ಹೇಳುತ್ತಾನೆ.

ಪೌಲನು ನಿರಂತರವಾದ ಅಪಾಯದಲ್ಲಿ ಒಬ್ಬ ನಿಜವಾದ ನಾಯಕನಾಗಿರುವದಕ್ಕೆ ದೃಢತೀರ್ಮಾನವನ್ನು ಮಾಡಿಕೊಂಡದ್ದು ಇತರರು ಸಹ ಹಾಗೆಯೇ ಮಾಡತಕ್ಕದ್ದು ಮತ್ತು ಮಾಡಬಲ್ಲರು ಎಂದು ತಿಳಿಸುವದಾಗಿತ್ತು. ತಾನು ಸರಪಣಿಗಳಿಂದ ಬಂಧಿಸಲ್ಪಟ್ಟವನಾಗಿ ಸೆರೆಮನೆಯಲ್ಲಿದ್ದಾಗ್ಯೂ ತನ್ನೊಳಗಿದ್ದ ದೃಢತೆಯಿಂದಾಗಿ ಫಿಲಿಪ್ಪಿಯದವರು ಪ್ರಯೋಜನವನ್ನು ಪಡೆದುಕೊಂಡಿದ್ದಾರೆಂಬುದನ್ನು ಆತನು ಗುರುತಿಸಿಕೊಂಡಿದ್ದನು. ಆತನ ಪರಿಸ್ಥಿತಿಯು "ಸುವಾರ್ತೆಯ ಪ್ರಸಾರಣೆಗೆ ಸಹಾಯವಾಯಿತು" ಮತ್ತು "ಸಹೋದರರಲ್ಲಿ ಬಹಳ ಜನರು ನನ್ನ ಬೇಡಿಗಳಿಂದಲೇ ಕರ್ತನಲ್ಲಿ ಭರವಸವುಳ್ಳವರಾಗಿ ದೇವರ ವಾಕ್ಯವನ್ನು

ನಿರ್ಭಯದಿಂದ ಹೇಳುವದಕ್ಕೆ ಇನ್ನೂ ವಿಶೇಷ ಧೈರ್ಯಹೊಂದಿದ್ದಾರೆ" ಎಂದು ಬರೆದನು (ಫಿಲಿಪ್ಪಿ 1:12b, 14).

## "ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ"

ಪೌಲನು ತನ್ನ ಬಾಧೆಯ ಕಾರಣದಿಂದ, ಹೀಗೆ ಹೇಳುವದಕ್ಕೆ ಶಕ್ತನಾಗಿದ್ದನು, **ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ**. ಆತನು ಅನುಭವಿಸಿದ ಬಾಧೆಯು ಕೊಲೊಸ್ಸೆಯವರಿಗೋಸ್ಕರ ಮಾತ್ರವಾಗಿರಲಿಲ್ಲ, ಆದರೆ ಇಡೀ ದೇಹಕ್ಕೋಸ್ಕರ ಆಗಿತ್ತು. ಆತನು ಕ್ರಿಸ್ತನಿಗಾಗಿ ಹೊಂದಿದ್ದ ಸಮರ್ಪಣೆ ಮತ್ತು ಕ್ರಿಸ್ತನ ದೇಹಕ್ಕೆ ಮಾಡುವ ಸೇವೆಯ ನಿಮಿತ್ತವಾಗಿ ಇತರರು ಆತನ ಮೇಲೆ ಕಷ್ಟಗಳನ್ನು ತಂದಿದ್ದರು, ಹೊರತು ಆತನ ಜೀವನ ಶೈಲಿಯ ನಿಮಿತ್ತವಾಗಿ ಅಲ್ಲ.

ಆತನು "ನನ್ನ ಶರೀರದಲ್ಲಿ" (ἐν τῇ σαρκί μου, *en tē sarki mou*) ಎಂದು ಹೇಳಿದಾಗ, ಪೌಲನ ತಾತ್ಪರ್ಯವು ಆತನ ಆಂತರಿಕ ವ್ಯಕ್ತಿಗೆ ನಿವಾಸವಾಗಿದ್ದ ದೈಹಿಕ ಶರೀರ ಎಂದಾಗಿತ್ತು (2 ಕೊರಿಂಥ 4:16; 5:1, 4). ಆತನು ಗ್ನಾಸ್ಟಿಕ್.ವಾದಿಗಳು ಕಲಿಸುತ್ತಿದ್ದ ರೀತಿಯಲ್ಲಿ, ತನ್ನ ಶರೀರವನ್ನು ಸ್ವಭಾವತಃ ಪಾಪಭರಿತವಾದದ್ದೆಂದು ಪರಿಗಣಿಸಿಕೊಳ್ಳಲಿಲ್ಲ.

ತಾನು ಒಬ್ಬ ಕ್ರೈಸ್ತನಾಗುವ ತನಕ, ಪೌಲನು ಯಾರ ಕೈಗಳಲ್ಲಿಯೂ ನಿಂದೆಗೊಳಗಾಗಿರಲಿಲ್ಲ. ಯೇಸುವಿನ ಒಬ್ಬ ಹಿಂಬಾಲಕನಾದಾಗ, ಹೇಗೂ, ಆತನು ಹೆಚ್ಚುಕಡಿಮೆ ನಿರಂತರವಾಗಿ ಹಿಂಸೆಯನ್ನು ಅನುಭವಿಸುವವನಾದನು. ಆತನು ಅನುಭವಿಸಿದ ಬಾಧೆಯು ಆತನ ಪಾಪಗಳ ನಿಮಿತ್ತದಿಂದಾಗಿರಲಿಲ್ಲ. ಆತನಿಗುಂಟಾದ ಸಂಕಷ್ಟಗಳಿಂದಾಗಿ ಆತನು ದೇವರ ಸಹಾಯದಲ್ಲಿ ಪೂರ್ಣ ವಿಶ್ವಾಸವಿಡುವಂತೆ ಮಾಡಿದ್ದು ಮಾತ್ರವಲ್ಲ, ಅವುಗಳು ಅದೇ ವೇಳೆಯಲ್ಲಿ ಯೇಸುವಿನ ದೇಹವೆಂಬ ಸಭೆಗೆ ಪ್ರಯೋಜನಕರ ಸಹ ಆಗಿದ್ದವು. ಆತನು ಬೇರೆ ಯಾರಿಗೂ ಸಹ ಮಾಡಲಾಗದ ರೀತಿಯಲ್ಲಿ ಸುವಾರ್ತೆಯನ್ನು ಪ್ರಸಾರಣೆ ಮಾಡುವದಕ್ಕೆ ಶಕ್ತನಾಗಿದ್ದನು, ಆ ಮೂಲಕ ರೋಮನ್ ಸಾಮ್ರಾಜ್ಯದುದ್ದಕ್ಕೂ ಸಭೆಯು ಬೆಳೆಯುವಂತಾಯಿತು. ಆತನು ಎಲ್ಲಾ ಪರಿಶ್ರಮಗಳು ಮತ್ತು ಆತನು ಅನುಭವಿಸಿದ ಎಲ್ಲಾ ಕಷ್ಟಗಳ ಹೊರತಾಗಿಯೂ, ಆತನು ಹೋದ ಕಡೆಗಳಲ್ಲೆಲ್ಲಾ ಸಭೆಗಳು ಹುಟ್ಟಿಕೊಂಡವು ಮತ್ತು ಭಕ್ತಿವೃದ್ಧಿಗೊಳಿಸಲ್ಪಟ್ಟವು. ಕ್ರಿಸ್ತನ ದೇಹದ ಪರವಾಗಿ ಆತನು ಮಾಡಿದ ಕೆಲಸವು ಸಭೆಗಳಲ್ಲಿ ಭಕ್ತಿವೃದ್ಧಿಗೊಳಿಸುವ ಮತ್ತು ಲೋಕದಲ್ಲೆಲ್ಲಾ ಹೊಸ ಸಭೆಗಳನ್ನು ಸ್ಥಾಪಿಸುವ ಉದ್ದೇಶಕ್ಕೋಸ್ಕರ ಆಗಿತ್ತು. ಇದರ ಜೊತೆಗೆ, ಆತನು ಸಭೆಗಳಿಗೆ ಪೋಷಣೆಯನ್ನು ಒದಗಿಸುವದಕ್ಕೋಸ್ಕರ ಬಹಳಷ್ಟನ್ನು ಅನುಭವಿಸಿದನು (2 ಕೊರಿಂಥ 11:28).

ಆತನು ಅನುಭವಿಸಿದ ಹಿಂಸೆಯು ಕೆಲವು ಸಾರಿ ಬಹಳ ಘೋರವಾಗಿರುತ್ತಿದ್ದು ಆತನು ಆತ್ಮದಲ್ಲಿ ಬೇಗುದಿಗೊಳ್ಳುತ್ತಿದ್ದನು. ಆತನು ಸ್ವತಃ ಜೀವನದ ಬಗ್ಗೆಯೇ ಹತಾಶೆಗೊಳ್ಳುವಷ್ಟರ ಮಟ್ಟಿಗೆ ಬಾಧೆಗೊಳಗಾದನು (2 ಕೊರಿಂಥ 1:8, 9; 6:4, 5; 11:23-27). ಪೌಲನು ವಿರೋಧ ಮತ್ತು ಕ್ರೂರವಾದ ವರ್ತನೆಗಳಿಗೆ ಗುರಿಯಾದಾಗ್ಯೂ ವಾಕ್ಯವನ್ನು ಸಾರುವವನಾಗಿ ಅನುಭವಿಸಿ ಅಂತರ್ಯದಲ್ಲಿನ ಹೋರಾಟಗಳು ಮತ್ತು ದೈಹಿಕ ನೋವು ಏನೆಂಬುದನ್ನು ಕ್ರೈಸ್ತರು ಎಂದಿಗೂ ತಿಳಿದುಕೊಳ್ಳಲಾಗದು. ಆತನು ಏನು

ಅನುಭವಿಸಬೇಕಾಗಿರುತ್ತದೆಂಬದ ಕುರಿತು ಯೇಸು ಆತನನ್ನು ಎಚ್ಚರಿಸಿದ್ದನು ಮತ್ತು ಭಯಪಡದಿರುವಂತೆ ಬುದ್ಧಿವಾದ ಹೇಳಿದ್ದನು (ಅಪೊಸ್ತಲರ ಕೃತ್ಯಗಳು 9:16; 18:9, 10; 1 ಕೊರಿಂಥ 2:1-3).

ಸುವಾರ್ತೆಯ ಪ್ರಸಾರಣೆಗೋಸ್ಕರ ಬಾಧೆಯನ್ನು ಅನುಭವಿಸುವ ಮೂಲಕ, ಆತನು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರನಾಗಿದ್ದನು. ಕ್ರಿಸ್ತನ ಧ್ಯೇಯಕ್ಕೋಸ್ಕರ ಇತರರು ಇನ್ನೂ ಬಹಳಷ್ಟನ್ನು ಅನುಭವಿಸಬೇಕಾಗಿರಬಹುದು; ಯುಗದ ಸಮಾಪ್ತಿಯ ವರೆಗೂ ಕ್ರಿಸ್ತನ ಹಿಂಬಾಲಕರು ಬಾಧೆ ಅನುಭವಿಸುವದನ್ನು ನಿರೀಕ್ಷಿಸಬಹುದಾಗಿದೆ. ಒಂದು ಅರ್ಥದಲ್ಲಿ, ಯೇಸುವು ಹೊರಟು ಹೋದ ಬಳಿಕ, ಯೇಸುವು ಎಲ್ಲಿಗೆ ನಿಲ್ಲಿಸಿದ್ದನೋ ಪೌಲನು ಅಲ್ಲಿಂದ ಮುಂದುವರೆಸಿದ್ದನು. ಆತನು ಯೇಸುವಿನ ಮಾದರಿಯನ್ನು ಅನುಸರಿಸುವವನಾಗಿ, ಸೈರಣೆಗೆ ಒಂದು ಮಾದರಿಯಾಗಿ ಮುಂದುವರೆದನು (1 ಪೇತ್ರ 2:21).

## "ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು . . . ತೀರಿಸುತ್ತೇನೆ"

"ತೀರಿಸುತ್ತೇನೆ" (ἀνταναπληρόω, *antanaplēroō*) ಎಂಬುದು ಹೊಸ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರವೇ ಸಿಕ್ಕುತ್ತದೆ. ತಾನು **ಇನ್ನೂ ಉಳಿದದ್ದನ್ನು . . . ತೀರಿಸುತ್ತೇನೆ** ಎಂದು ಹೇಳುವ ಮೂಲಕ, ಪೌಲನು ಲೋಕದಲ್ಲೆಲ್ಲಾ ಸುವಾರ್ತೆಯನ್ನು ಪ್ರಸಾರಣೆ ಮಾಡುವದರಲ್ಲಿ ಯೇಸುವಿನ ಕೆಲಸವನ್ನು ತಾನೊಬ್ಬನೇ ಮುಗಿಸುತ್ತಿದ್ದಾನೆಂಬ ಸೂಚ್ಯಾರ್ಥದಲ್ಲಿ ಹೇಳಲಿಲ್ಲ. ಆತನು ಈ ಪ್ರಯಾಸದಲ್ಲಿ ತನ್ನ ಪಾಲನ್ನು ಮಾಡುತ್ತಿದ್ದಾನೆಂಬ ಅರ್ಥದಲ್ಲಿ ಹೇಳಿದನು.

**ಸಂಕಟಗಳೊಳಗೆ** (θλίψεις, *thlipseis*) ಎಂಬುದು "ಬಾಧೆಗಳು" (παθήματα, *pathēmata*) ಎಂಬದಕ್ಕಿಂತ ವ್ಯತ್ಯಾಸವಾದ ಅರ್ಥವನ್ನು ಹೊಂದಿರುತ್ತದೆ, ಇದು ಈ ವಚನದ ಆರಂಭದಲ್ಲಿ ಕಾಣಿಸಿಕೊಳ್ಳುತ್ತದೆ. "ಬಾಧೆಗಳು" ಎಂಬದಕ್ಕಾಗಿರುವ ಪದವು ಸಾಮಾನ್ಯವಾಗಿ ಹೊಡೆತಗಳಿಂದುಂಟಾಗುವ ನೋವು ಎಂಬ ಅರ್ಥವನ್ನು ಕೊಡುತ್ತದೆ ಮತ್ತು ಅದು ಕ್ರಿಸ್ತನ ಶಿಲುಬೆಯನ್ನು ಸೂಚಿಸಬಹುದಾಗಿದೆ (2 ಕೊರಿಂಥ 1:5; ಇಬ್ರಿಯ 2:9, 10). "ಬಾಧೆಗಳು" ಎಂಬದಕ್ಕಾಗಿರುವ ಪದದ ಕುರಿತಾಗಿ, H. C. G. Moule ಹೀಗೆ ಬರೆಯುತ್ತಾನೆ,

> ಇದು ಹೊಸ ಒಡಂಬಡಿಕೆಯಲ್ಲಿ ಬೇರೆ ಎಲ್ಲಿಯೂ ನಮ್ಮ ಧನ್ಯ ಕರ್ತನ ಅನುಭವಗಳನ್ನು ಸೂಚಿಸುವದಕ್ಕಾಗಿ ಬಳಸಲ್ಪಟ್ಟಿರುವದಿಲ್ಲ, ಆದರೂ ಇದು ಶಿಲುಬೆಯ ಕುರಿತ ಕೀರ್ತನೆಯಲ್ಲಿ ಕಾಣಿಸಿಕೊಳ್ಳುತ್ತದೆ [ಕೀರ್ತನೆ 22 (ನಲ್ಲಿ LXX 21)]. ಇದರ ಸಾಧಾರಣ ಉಲ್ಲೇಖನವು ಮರಣದ ಬಾಧೆಯ ಕುರಿತಾಗಿರುವದಿಲ್ಲ ಆದರೆ ಹಿಂಸೆಯ ಶ್ರಮ ಮತ್ತು ವೇದನೆಗಳನ್ನು ಸೂಚಿಸುತ್ತದೆ, ಮತ್ತು ಒಟ್ಟಾರೆಯಾಗಿ [ಭಾರಗೊಂಡ] *ಜೀವನದ* ಸಂಕಷ್ಟಗಳನ್ನು ಸೂಚಿಸುತ್ತದೆ.[2]

ಮುಂದಿನ ವಚನಗಳಲ್ಲಿ, ಪೌಲನು ತನ್ನ ಸೇವೆಯ ಬಗ್ಗೆ ಚರ್ಚಿಸುತ್ತಾ, ತಾನು "ಸಂಕಟಗಳೊಳಗೆ" ಎಂದು ಹೇಳಿದ್ದರ ತಾತ್ಪರ್ಯವೇನೆಂಬ ಬಗ್ಗೆ ತಿಳುವಳಿಕೆಯನ್ನು ನೀಡುತ್ತಾನೆ. ಆತನ ಸೇವೆಯ ಫಲಿತವಾಗಿ, ಆತನು ಕಷ್ಟಗಳನ್ನು ಮತ್ತು ಶ್ರಮೆಗಳನ್ನು ಅನುಭವಿಸಿದನು (2 ಕೊರಿಂಥ 1:4-8; 2:4; 4:8, 17; 7:4, 5; ಫಿಲಿಪ್ಪಿ 4:14; 1 ಥೆಸಲೋನಿಕ

3:4, 7). ಆತನು ಇವುಗಳ ಬಗ್ಗೆ 2 ಕೊರಿಂಥ 11:23-30 ವಚನಗಳಲ್ಲಿ ಸ್ವಲ್ಪ ವಿವರವಾಗಿ ಚರ್ಚಿಸುತ್ತಾನೆ. ಅಲ್ಲದೆ ಆತನು ಕ್ರೈಸ್ತರು ಅನುಭವಿಸುವಂಥ ಸಂಕಟಗಳ ಬಗ್ಗೆ ಸಹ ಬರೆದನು (2 ಕೊರಿಂಥ 1:4; 8:2, 13; 2 ಥೆಸಲೋನಿಕ 1:4, 6, 7).

ಆತನು ಕ್ರಿಸ್ತನ "ಸಂಕಟಗಳೊಳಗೆ" (ಬಹುವಚನ) ಎಂದು ಹೇಳಿದಾಗ, ಪೌಲನ ತಾತ್ಪರ್ಯವು ಶಿಲುಬೆಯ ವೇದನೆ ಎಂಬದಕ್ಕಿಂತಲೂ ಹೆಚ್ಚಿನದ್ದಾಗಿತ್ತು. ಯೇಸುವು ಶಿಲುಬೆಯ ಮೇಲೆ ಅನುಭವಿಸಿದ ಬಾಧೆಗಿಂತಲೂ ಪೌಲನ ಬಾಧೆಯು ವ್ಯತ್ಯಾಸವಾಗಿತ್ತು ಮತ್ತು ಬೇರೆ ಉದ್ದೇಶಕ್ಕೋಸ್ಕರವಾಗಿತ್ತು. ಯೇಸು ತನ್ನ ವೈಯಕ್ತಿಕ ಸೇವೆಯ ವೇಳೆಯಲ್ಲಿ ಅಪಹಾಸ್ಯ ಮತ್ತು ವಿರೋಧದ ಮಧ್ಯದಲ್ಲಿ ಅನುಭವಿಸಿದ ಭಾರಗಳು, ಶ್ರಮ, ಅವಮಾನ, ಮತ್ತು ಪ್ರಯಾಸಗಳು ಎಂಬ ಅರ್ಥದಲ್ಲಿ ಪೌಲನು ಹೇಳಿದನು (ಇಬ್ರಿಯ 12:3, 4). ಸುವಾರ್ತೆಯನ್ನು ಪ್ರಸಾರಣೆ ಮಾಡುವವರಿಗೆ ಅಂಥ ಸಂಕಷ್ಟಗಳು ಮತ್ತು ವಿರೋಧಗಳು ಎದುರಾಗುವದನ್ನು ನಿರೀಕ್ಷಿಸಬಹುದಾಗಿದೆ. ಯೇಸುವಿಗೆ ತಾನು ಮಾಡಿದ ಸೇವೆ ಕಾರಣದಿಂದಾಗಿ, "ಕ್ರಿಸ್ತನ ನಿಮಿತ್ತ ನಮಗೆ ಬಾಧೆಗಳು . . . ಹೇರಳವಾಗಿ ಉಂಟಾಗುತ್ತವೆ" ಎಂದು ಪೌಲನು ಬರೆದನು (2 ಕೊರಿಂಥ 1:5). ಆತನು ತನ್ನ ದೇಹದಲ್ಲಿ "ಯೇಸುವಿನ ಮರಣಾವಸ್ಥೆಯನ್ನು" ಹೊಂದಿದ್ದೇನೆ (2 ಕೊರಿಂಥ 4:10) ಮತ್ತು "ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ" ಎಂದು ಹೇಳಿದನು (ಗಲಾತ್ಯ 6:17). ಆತನ ಗುರಿಯು "ಆತನ ಬಾಧೆಗಳಲ್ಲಿ ಪಾಲುಗಾರನಾಗ"ಬೇಕು ಎಂಬದಾಗಿತ್ತು (ಫಿಲಿಪ್ಪಿ 3:10).

ಯೇಸುವಿನ ಬಾಧೆಗಳು ವಾಕ್ಯವನ್ನು ಸಾರುವವರಿಗಾಗುವ ಬಾಧೆಗಳಲ್ಲಿ ಕೇವಲ ಆರಂಭವಷ್ಟೇ ಆಗಿದ್ದವು. ಆತನು ಪರಲೋಕಾರೋಹಣಗೊಂಡ ಬಳಿಕ, ಆತನ ಬಾಧೆಗಳು ಆತನ ಹಿಂಬಾಲಕರಲ್ಲಿ ಮುಂದುವರೆಯಲಿದ್ದವು. ಆತನು ಸುವಾರ್ತೆಯನ್ನು ಸಾರುವದಕ್ಕೆ ಭೂಮಿಯ ಮೇಲೆ ಉಳಿದಿದ್ದರೆ, ಆತನು ಇನ್ನಷ್ಟು ಬಾಧೆಗಳನ್ನೂ ವಿರೋಧವನ್ನೂ ಅನುಭವಿಸಿರುತ್ತಿದ್ದನು. ಬದಲಾಗಿ, ಆತನ ಕೆಲಸವನ್ನು ಮುಂದುವರೆಸುವದಕ್ಕಾಗಿ ಮತ್ತು ಆತನು ಆರಂಭಿಸಿದ್ದನ್ನು ಪೂರ್ತಿಗೊಳಿಸುವದಕ್ಕಾಗಿ ನಿಂದೆಯನ್ನು ಅನುಭವಿಸಬೇಕಾಗಿತ್ತು. ಸುವಾರ್ತೆಯು ಸಾರಲ್ಪಡುತ್ತಿರುವ ತನಕ, ವಿರೋಧವು ಮುಂದುವರೆಯುವದು.

> ಈ ವಿಧದಲ್ಲಿ ಪೌಲನು, ಕ್ರಿಸ್ತನ ದೇಹವೆಂಬ ಸಭೆಗೋಸ್ಕರವಾಗಿ, ಇನ್ನೂ ಉಳಿದಿದ್ದನ್ನೂ ನೆರವೇರಿಸುವವನಾಗಿದ್ದನು. ಆತನು ಇದನ್ನು ತನ್ನ ಮಾತುಗಳಲ್ಲಿ ಮಾತ್ರವೇ ಮಾಡುವದಿಲ್ಲ, ಆದರೆ ತನ್ನ ಶರೀರದಲ್ಲಿ, ಅಂದರೆ ಸ್ವಂತ ವಾಸ್ತವಿಕವಾದ, ದೈಹಿಕ ಜೀವದಲ್ಲಿ ಮಾಡುವವನಾಗಿದ್ದಾನೆ. ಇದರ ಏಕೈಕ ಅರ್ಥವು "ಕ್ರಿಸ್ತನ ಸಂಕಟಗಳನ್ನು" ಅನುಭವಿಸುವದು, ಕ್ರಿಸ್ತನ ನಿಮಿತ್ತವಾಗಿ ತೆಗೆದುಕೊಳ್ಳಲಾದ ತೊಂದರೆಗಳು ಎಂದಾಗಿರಬಲ್ಲದು; ಮತ್ತು ಈ ತೊಂದರೆಗಳು ಮಾತ್ರವೇ ನಂಬಿಕೆಯು ಕೊಲೊಸ್ಸೆಯವರಲ್ಲಿ ಮತ್ತು ಲೋಕದಲ್ಲೆಲ್ಲಾ ಇರುವ ಇತರ ಸಮುದಾಯಗಳೊಳಗೆ ತನ್ನ ಪರಿಪೂರ್ಣತೆಯನ್ನು ಸಾಧಿಸುವ ವಿಧದಲ್ಲಿ ಸಾರುವಿಕೆಯು ಪರಿಣಾಮಕಾರಿಯಾಗುವಂತೆ ಅನುಮತಿಸುವದು.[3]

ತಾನು "ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು . . . ತೀರಿಸುತ್ತೇನೆ" ಎಂದು ಹೇಳುವ ಮೂಲಕ, ಪೌಲನ ತಾತ್ಪರ್ಯವು ಕ್ರಿಸ್ತನ ಯಜ್ಞವು ಸಾಕಾದದ್ದಾಗಿರುವದಿಲ್ಲವೆಂದೂ ಅದನ್ನು ಪೂರ್ಣಗೊಳಿಸುವದಕ್ಕೆ ಇನ್ನಷ್ಟು ಬಾಧೆಯನ್ನನುಭವಿಸುವದು ಅಗತ್ಯವೆಂದೂ

ಆಗಿರಲಿಲ್ಲ. ಯೇಸು ತನ್ನ ಮರಣದ ಮೂಲಕ ಸಂಧಾನವನ್ನು ಸಾಧ್ಯಗೊಳಿಸಿದನು ಎಂದು (ವಚನಗಳು 20-22) ಮತ್ತು ಕ್ರೈಸ್ತರು ಆತನಲ್ಲಿ ಪರಿಪೂರ್ಣತೆಯನ್ನು ಹೊಂದಿದದವರೆಂದು ಆತನು ಹೇಳಿದನು (2:10). ಯೇಸುವಿನ ಒಂದೇ ಯಜ್ಞವು ಆತನನ್ನು ಪರಿಪೂರ್ಣಗೊಳಿಸಿತು, "ಸಿದ್ಧಿಗೆ ಬಂದವನನ್ನಾಗಿ" (ಇಬ್ರಿಯ 5:8, 9), ಮತ್ತು ಸಾಕಾದವನನ್ನಾಗಿ ಮಾಡಿತು. ಆತನು ಇಡೀ ಲೋಕದ ಎಲ್ಲಾ ಪಾಪಗಳನ್ನು ನಿವಾರಿಸುವದಕ್ಕೆ ಶಕ್ತನಾಗಿದ್ದಾನೆ (1 ಯೋಹಾನ 2:2). ಒಂದೇ ಯಜ್ಞದ ಮೂಲಕವಾಗಿ (ಇಬ್ರಿಯ 7:27; 9:26-28; 10:10-14), ಮಾನವರ ರಕ್ಷಣೆಗೋಸ್ಕರ ಅವಶ್ಯಕವಾದದ್ದೆಲ್ಲವನ್ನೂ ಆತನು ಪೂರ್ತಿಗೊಳಿಸಿದನು.

## ಅವರಿಗೆ ತಿಳಿಸಲ್ಪಟ್ಟ ಮರ್ಮ (1:25-27)

**[25]ನಾನು ಸಭೆಗೆ ಸೇವಕನಾದೆನು. ದೇವರು ತನ್ನ ವಾಕ್ಯವನ್ನು ಸಂಪೂರ್ಣವಾಗಿ ತಿಳಿಸುವ ಕೆಲಸವನ್ನು ನಿಮ್ಮ ಪ್ರಯೋಜನಕ್ಕೋಸ್ಕರ ನನಗೆ ದಯಪಾಲಿಸಿದನು. [26]ಆ ವಾಕ್ಯವು ಹಿಂದಿನ ಯುಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ. [27]ಅನ್ಯಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸುಮಾಡಿಕೊಂಡನು. ಈ ಮರ್ಮವು ಏನೆಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುದೇ.**

### "ನಾನು ಸಭೆಗೆ ಸೇವಕನಾದೆನು" (1:25)

ಪೌಲನು ತನ್ನನ್ನು **ಸಭೆಗೆ ಸೇವಕನಾಗಿ** (διάκονος, *diakonos*, ಮಧ್ಯಸ್ಥಗಾರ, ಮಧ್ಯವರ್ತಿ, ಓಲೆಕಾರ)[4] ಮಾಡಲ್ಪಟ್ಟವನು ಎಂಬ ಸೂಚ್ಯಾರ್ಥವನ್ನು ನೀಡುತ್ತಾನೆ. ಗ್ರೀಕ್ ವಾಕ್ಯದ 25ನೇ ವಚನದಲ್ಲಿ ಸಭೆ ಎಂಬ ಪದವು ಕಾಣಿಸಿಕೊಳ್ಳುವದಿಲ್ಲ, ಆದರೆ ಅದರ ಸೂಚ್ಯಾರ್ಥವು ಇರುತ್ತದೆ. ಈ ಸಂದರ್ಭದಲ್ಲಿ ಪೌಲನು ತನ್ನನ್ನು ಸಭೆಯ ಹಿರಿಯನ ಹುದ್ದೆ ಹೊಂದಿದವನೆಂಬದಾಗಿ ಸೂಚಿಸಿಕೊಳ್ಳಲಿಲ್ಲ; ಬದಲಾಗಿ, ತಾನು ಕ್ರಿಸ್ತನ ಒಬ್ಬ ದಾಸನಾಗಿದ್ದು ಯೇಸುವೇ ತನಗೆ ಈ ಜವಾಬ್ದಾರಿಯನ್ನು ಕೊಟ್ಟಿರುತ್ತಾನೆ ಎಂದು ಹೇಳುತ್ತಾನೆ. ಆತನು ಸಭೆಯ ಸೇವಕನು ಮಾತ್ರವೇ ಆಗಿರಲಿಲ್ಲ, ಆದರೆ ಆತನು ಸುವಾರ್ತೆಗೆ ಒಬ್ಬ "ಸೇವಕನು" ಅಥವಾ ದಾಸನು ಸಹ ಆಗಿದ್ದನು (ವ. 23).

ದಮಸ್ಕದ ಮಾರ್ಗದಲ್ಲಿ ಯೇಸು ಪೌಲನಿಗೆ ಕಾಣಿಸಿಕೊಂಡ ವೇಳೆಯಲ್ಲಿ, ಆತನು ಪೌಲನಿಗೆ ಆತನು ಒಬ್ಬ "ಸೇವಕನಾಗಿ" (ὑπηρέτης, *hupēretēs*) ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 26:16). ಪೌಲನು ಯೇಸುವಿಗೆ ಮಾಡಿದ ಸೇವೆಯ ವಿಷಯದಲ್ಲಿ ಸಹ 1 ಕೊರಿಂಥ 4:1ರಲ್ಲಿ ಅದೇ ಪದವು ಬಳಸಲ್ಪಟ್ಟಿದೆ. ಅದೇ ರೀತಿಯಲ್ಲಿಯೇ, ಅದು ಯೋಹಾನನೆಂಬ ಮಾರ್ಕನ ವಿಷಯದಲ್ಲಿ (ಅಪೊಸ್ತಲರ ಕೃತ್ಯಗಳು 13:5); ಸೇವಕರು, ಅಥವಾ ಆಳುಗಳ ವಿಷಯವಾಗಿ (ಲೂಕ 1:2; 4:20); ಮತ್ತು ಓಲೇಕಾರರ ವಿಷಯವಾಗಿ (ಮತ್ತಾಯ 5:25; 26:58; ಯೋಹಾನ 7:32; 18:3).

ಈ ವಾಕ್ಯಭಾಗದಲ್ಲಿ ಪೌಲನು ತಾನು ಕ್ರಿಸ್ತನ ಸೇವೆಯನ್ನು ಮಾತ್ರವಲ್ಲದೆ ಸಭೆಯ

ಸೇವೆಯನ್ನು ಸಹ ಮಾಡಿವವನು ಎಂಬದಾಗಿ ವಿವರಿಸುತ್ತಾನೆ. ಹೇಗೂ, ಸಭೆಯ ಅಗತ್ಯತೆಗಳಿಗೆ ಸೇವೆಯನ್ನು ಮಾಡುವ ಮೂಲಕ, ಆತನು ಯೇಸುವಿಗೆ ಸೇವೆ ಮಾಡಿದವನಾಗಿದ್ದನು. ಕ್ರೈಸ್ತರು ತಮ್ಮನ್ನು ಜೊತೆ ಕ್ರೈಸ್ತರಿಂದ ಬೇರ್ಪಡಿಸಿಕೊಳ್ಳುವಾಗ ಅವರು ಸರಿಯಾಗಿ ಸೇವೆ ಮಾಡುವವರಾಗಿರುವದಿಲ್ಲ. ಯೇಸು ಹೀಗೆ ಹೇಳಿದನು, "ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 25:40).

## "ದೇವರು . . . ಕೆಲಸವನ್ನು . . . ನನಗೆ ದಯಪಾಲಿಸಿದನು" (1:25)

ತಂದೆ ಮತ್ತು ಮಗನು ಪರಸ್ಪರ ಸಂಯೋಗದಿಂದ ಕೆಲಸ ಮಾಡುತ್ತಾರೆ. ಯೇಸುವು ತನ್ನ ಮನೆವಾರ್ತೆ ಕೆಲಸವನ್ನು ಶೀಘ್ರದಲ್ಲೇ ಕಳಕೊಳ್ಳಲಿದ್ದ ಕಳ್ಳ ಮನೆವಾರ್ತೆಯವನ ಸಾಮ್ಯದಲ್ಲಿ **ಮನೆವಾರ್ತೆತನದ** (οἰκονομία, *oikonomia*) ಯೋಚನೆಯನ್ನು ಬಳಸಿದನು, ಅದೊಂದು ಮತ್ತೊಬ್ಬನ ಸೇವೆಯಲ್ಲಿರುವ ಜವಾಬ್ದಾರಿಯ ಸ್ಥಾನವಾಗಿತ್ತು (ಲೂಕ 16:1-4, 8). *Oikonomia* ಎಂಬ ಮೂಲ ಪದದ ವಿವಿಧ ರೂಪಗಳು, "ಮನೆವಾರ್ತೆ" ಅಥವಾ "ಮನೆವಾರ್ತೆತನ" ಎಂದು (ಲೂಕ 12:42; 1 ಕೊರಿಂಥ 9:17; ಎಫೆಸ 3:2; ತೀತನಿಗೆ 1:7; 1 ಪೇತ್ರ 4:10); "ಖಜಾನೆಯ ಮೇಲ್ವಿಚಾರಕ" (ರೋಮಾ 16:23); "ಪಾಲಕರು" (ಗಲಾತ್ಯ 4:2); ಮತ್ತು "ನಿರ್ವಹಣೆ" (ಎಫೆಸ 1:10; 1 ತಿಮೊಥೆ 1:4) ಅನುವಾದಿಸಲ್ಪಟ್ಟಿರುತ್ತವೆ.

ಯೇಸುವು ಪೌಲನಿಗೆ ಸುವಾರ್ತೆಯನ್ನು ಸಾರುವ ಕೆಲಸವನ್ನು ಒಪ್ಪಿಸಿದ್ದನು. ಪೌಲನು ತನ್ನ ಜವಾಬ್ದಾರಿಯನ್ನು ನೆರವೇರಿಸುವವನಾಗಿ, ತನ್ನ ಜೀವಿತ, ಸಮಯ, ಸ್ವತ್ತುಗಳು, ಮತ್ತು ಸಾಮರ್ಥ್ಯಗಳು ಯೇಸುವಿಗೆ ಸೇರಿದವುಗಳು ಮತ್ತು ಆತನ ಸೇವೆಯಲ್ಲಿ ಬಳಸಲ್ಪಡತಕ್ಕದ್ದೆಂದು ಪರಿಗಣಿಸಿಕೊಂಡಿದ್ದನು. ಆತನು ತನ್ನನ್ನು ಯೇಸುವಿಗೆ ಸೇರಿದಂಥ ಕಾರ್ಯದ ಮನೆವಾರ್ತೆಯವನೆಂದು ತಿಳಿದುಕೊಂಡಿದ್ದನು. ಈ ಕಾರಣಕ್ಕಾಗಿ, ಆತನು ತನ್ನ ವಶಕ್ಕೆ ಒಪ್ಪಿಸಲ್ಪಟ್ಟದ್ದನ್ನು ಬಳಸಿಕೊಳ್ಳುವದರಲ್ಲಿ ನಂಬಿಗಸ್ತನಾಗಿರುವ ಹಂಗಿನಲ್ಲಿದ್ದೇನೆಂದು ಭಾವಿಸಿಕೊಂಡನು (1 ಕೊರಿಂಥ 4:1, 2). ತಾನು ಯೇಸುವಿಗೆ ಲೆಕ್ಕವನ್ನ ಒಪ್ಪಿಸಲಿರುವವನೆಂಬದನ್ನು ಗ್ರಹಿಸಿಕೊಂಡವನಾಗಿ (2 ಕೊರಿಂಥ 5:10), ಆತನು ಮನುಷ್ಯರನ್ನು ಮೆಚ್ಚಿಸುವ ಬದಲಾಗಿ ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸಿದನು (ಗಲಾತ್ಯ 1:10-12).

## "ವಾಕ್ಯವನ್ನು ಸಂಪೂರ್ಣವಾಗಿ ತಿಳಿಸುವ ಕೆಲಸವನ್ನು ನಿಮ್ಮ ಪ್ರಯೋಜನಕ್ಕೋಸ್ಕರ ನನಗೆ ದಯಪಾಲಿಸಿದನು" (1:25)

ಪೌಲನು ತನಗೆ ತಾನೇ ಮನೆವಾರ್ತೆಯ ಕೆಲಸವನ್ನು ಆರಂಭಿಸಿರಲಿಲ್ಲ. ಯೇಸುವು ಅದನ್ನು ದೇವರ ಚಿತ್ತದ ಮೇರೆಗೆ ಆತನಿಗೆ ದಯಪಾಲಿಸಿದ್ದನು.[5] ಆತನ ಮನೆವಾರ್ತೆತನದಲ್ಲಿ ಮೊದಲು ಯೆಹೂದ್ಯರು ಸೇರಿದ್ದರು (ರೋಮಾ 1:16; ನೋಡಿರಿ ಅಪೊಸ್ತಲರ ಕೃತ್ಯಗಳು 13:14-16; 14:1; 17:1), ಮತ್ತು ನಂತರ ಅನ್ಯಜನರು ಸೇರಿದ್ದರು (ರೋಮಾ 11:13; ಗಲಾತ್ಯ 2:8, 9). ಪೌಲನ ಸೇವೆಯು ಪ್ರತ್ಯೇಕವಾಗಿ ಕೊಲೊಸ್ಸೆಯವರಿಗೋಸ್ಕರ ಇದ್ದಿರಲಿಲ್ಲವಾದಾಗ್ಯೂ, ಅವರು ಸಹ ಅದರಲ್ಲಿ ಸೇರಿದ್ದರು.

ಪೌಲನ ಮನೆವಾರ್ತೆತನದ ಉದ್ದೇಶವು ಯೇಸುವಿನ ಇಡೀ ಸಂದೇಶವನ್ನು ತಾನು

ಭೇಟಿಯಾಗುವ ಯಾರಿಗೇ ಆಗಲಿ ಸಾರುವದಾಗಿತ್ತು. ಆತನು ಅದನ್ನು ಶ್ರದ್ಧಾಪೂರ್ವಕವಾಗಿ ಮಾಡಿದನು. ಆತನು ಎಫೆಸದ ಹಿರಿಯರಿಗೆ ಹೀಗೆ ಹೇಳಿದನು, "ನಾನು ಹಿತಕರವಾದದ್ದೆಲ್ಲವನ್ನು ಹೇಳುವದಕ್ಕೂ . . . ಹಿಂತೆಗಿಯದೆ" ಇದ್ದೆನು; "ಯಾಕೆಂದರೆ ಒಂದನ್ನೂ ಮರೆಮಾಡದೆ ದೇವರ ಸಂಕಲ್ಪವನ್ನೆಲ್ಲಾ ನಿಮಗೆ ತಿಳಿಸಿದೆನು" (ಅಪೊಸ್ತಲರ ಕೃತ್ಯಗಳು 20:20, 27).

ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಇಲ್ಲಿ ಮಾತ್ರವೇ **ದೇವರ ವಾಕ್ಯ** ಎಂಬುದು ಬಳಸಲ್ಪಟ್ಟಿದೆ. ಬಳಸಲ್ಪಟ್ಟಿರುವ ಇನ್ನು ಕೆಲವು ಪದಗುಚ್ಛಗಳೆಂದರೆ "ಸುವಾರ್ತೆಯ ಸತ್ಯವಾಕ್ಯ" (1:5), "ಕ್ರಿಸ್ತನ ವಾಕ್ಯವು" (3:16), ಮತ್ತು "ವಾಕ್ಯ" (4:3). ಯೇಸುವು ತಂದೆಯಿಂದ ಪಡೆದುಕೊಂಡ ವಾಕ್ಯವನ್ನು (ಯೋಹಾನ 12:49, 50; 17:8) ಹೊಸ ಒಡಂಬಡಿಕೆಯ ಬರಹಗಾರರಿಗೆ ಪವಿತ್ರಾತ್ಮನ ಮೂಲಕವಾಗಿ ಪ್ರಕಟಗೊಳಿಸಿದನು (ಯೋಹಾನ 14:26; 16:13-15; ಎಫೆಸ 3:3-5).

ದೇವರ ವಾಕ್ಯವನ್ನು ಸಾರುವದು ಪೌಲನಿಗೆ ಎಲ್ಲಕ್ಕಿಂತಲೂ ಅತಿಮುಖ್ಯವಾಗಿತ್ತು, ಅದು ತಿಮೊಥೆಯನಿಗೆ ಆತನು ಹೇಳುವ ಬುದ್ಧಿವಾದದಲ್ಲಿ ತೋರಿ ಬರುತ್ತದೆ (2 ತಿಮೊಥೆ 4:2). ಆತನು "ದೇವರ ವಾಕ್ಯ"ವನ್ನೇ ಸಾರಿದನು ಮತ್ತು ಉಪದೇಶಿಸಿದನು.[6]

## "ಆ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು" (1:26)

**ಮರ್ಮ** (μυστήριον, *mustērion*) ಎಂದರೆ ಮರೆಯಾಗಿಡಲ್ಪಟ್ಟಿರುವ ಮತ್ತು ಅದು ಪ್ರಕಟಗೊಳಿಸಲ್ಪಡುವ ತನಕ ಅರ್ಥವಾಗದಂಥ ಒಂದು ಸತ್ಯ ಆಗಿರುತ್ತದೆ. J. B. Lightfoot ಹೀಗೆ ಹೇಳುತ್ತಾನೆ, ". . . ಪದವು 'ಒಂದು ಕಾಲದಲ್ಲಿ ಮರೆಯಾಗಿದ್ದ ಆದರೆ ಈಗ ಬಯಲುಗೊಳಿಸಲ್ಪಟ್ಟಿರುವ ಒಂದು ಸತ್ಯ,' 'ವಿಶೇಷ ಪ್ರಕಟನೆಯ ಹೊರತಾಗಿ ತಿಳಿಯದೆ ಇದ್ದಿರಬಹುದಾಗಿದ್ದ ಒಂದು ಸತ್ಯ' ಎಂದಷ್ಟೆ ಅರ್ಥವನ್ನು ಸೂಚಿಸುತ್ತದೆ."[7] ಅದು ನಿಗೂಢವಾದದ್ದು ಅಥವಾ ಕಂಡುಕೊಳ್ಳುವದಕ್ಕೆ ಸಾಧ್ಯವಿಲ್ಲದ್ದು ಎಂದರ್ಥವಾಗಿರುವದಿಲ್ಲ. ಹೊಸ ಒಡಂಬಡಿಕೆಯ ಪ್ರಕಟನೆಯ ಸಹಾಯವಿಲ್ಲದಿದ್ದರೆ, ಹಳೆ ಒಡಂಬಡಿಕೆಯ ಕೆಲವೊಂದು ಪ್ರವಾದನಾ ಹೇಳಿಕೆಗಳು ಮರೆಯಾಗಿಡಲ್ಪಟ್ಟಿರುವ ಮರ್ಮಗಳಾಗಿಯೇ, ಎಂದಿಗೂ ಅರ್ಥವಾಗದೆಯೇ ಉಳಿದಿರುತ್ತಿದ್ದವು (2 ಕೊರಿಂಥ 3:14).

ಯೇಸುವು ತನ್ನ ಶಿಷ್ಯರಿಗೆ ಪರಲೋಕರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಡಲ್ಪಟ್ಟಿದೆ, ಜನರ ಗುಂಪುಗಳಿಗೆ ಕೊಡಲ್ಪಟ್ಟಿಲ್ಲ ಎಂದು ಹೇಳಿದನು (ಮತ್ತಾಯ 13:11). ಯೇಸುವಿನ ಮೂಲಕವಾದ ದೇವರ ರಕ್ಷಣಾಯೋಜನೆ ಮತ್ತು ಆಶೀರ್ವಾದಗಳ ವಿಷಯದಲ್ಲಿ ಪೌಲನು ಅದೇ ಪದವನ್ನು ಬಳಸುತ್ತಾನೆ.[8] ಮರ್ಮದ ಪ್ರಮುಖ ಭಾಗವೇನಾಗಿತ್ತೆಂದರೆ ದೇವರು ಯೆಹೂದ್ಯರನ್ನು ಮತ್ತು ಅನ್ಯಜನರನ್ನು ಒಂದೇ ದೇಹದ ಅಂಗಗಳನ್ನಾಗಿ ಅಂಗೀಕರಿಸಿಕೊಳ್ಳುವನು ಎಂಬದೇ (ಎಫೆಸ 3:3, 6).

ಯೆಸುವಿನ ಬರೋಣಕ್ಕೆ ಮುನ್ನ, ಕ್ರಿಸ್ತನ ವಿಷಯವಾದ ಹಳೆಯ ಒಡಂಬಡಿಕೆಯ ಪ್ರವಾದನೆಗಳು **ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿದ್ದವು**. ದೇವರು ತನ್ನ ಸ್ವಂತ ಕಾಲದಲ್ಲಿ, ಅವುಗಳ ಅರ್ಥವನ್ನು ತಿಳಿಯಪಡಿಸುವದಕ್ಕೆ ನಿಷ್ಕರ್ಷೆಮಾಡಿಕೊಳ್ಳುವ ವರೆಗೂ, ಅವುಗಳು ಮರೆಯಾಗಿಡಲ್ಪಟ್ಟಿದ್ದವು. ಪೌಲನು ಎಫೆಸ

3:3-5ರಲ್ಲಿ ಈ ಸೂಚ್ಯಾರ್ಥವನ್ನು ತಿಳಿಸುತ್ತಾನೆ. ಅಲ್ಲಿ ಆತನು ತಾನು ಬರೆದದ್ದನ್ನು ಓದುವ ಮೂಲಕ "ಇದುವರೆಗೆ" ಗುಪ್ತವಾಗಿದ್ದ ಮರ್ಮವನ್ನು ತಿಳುಕೊಳ್ಳುವಿರಿ ಎಂದು ಹೇಳುತ್ತಾನೆ.

ಐಥಿಯೋಪ್ಯದ ಕಂಚುಕಿಯು ಹಳೆಯ ಒಡಂಬಡಿಕೆಯ ಪ್ರವಾದನೆಗಳನ್ನು ಅರ್ಥಮಾಡಿಕೊಳ್ಳಲು ಹೆಚ್ಚಿನ ಪ್ರಕಟನೆಯ ಅಗತ್ಯವಿದೆ ಎಂಬುದಕ್ಕೆ ಒಂದು ಉತ್ತಮ ಉದಾಹರಣೆಯಾಗಿರುತ್ತಾನೆ. ಫಿಲಿಪ್ಪನು ಬಂದು ಯೇಸುವಿನ ಬಗ್ಗೆ ಹೇಳುವ ತನಕ ಆತನಿಗೆ ಯೆಶಾಯ 53ನೇ ಅಧ್ಯಾಯದ ಅರ್ಥವು ಏನೆಂಬುದು ಗೊತ್ತಾಗಲಿಲ್ಲ (ಅಪೊಸ್ತಲರ ಕೃತ್ಯಗಳು 8:30-39).

ಯೇಸುವಿನ ಕುರಿತಾದ ಪ್ರವಾದನೆಗಳು ಮತ್ತು ಆತನ ಬರೋಣಕ್ಕೆ ಸಂಬಂಧಿಸಿದ ಘಟನೆಗಳು ಲೋಕದ ಇತಿಹಾಸದ ಆರಂಭದಲ್ಲಿಯೇ ಮೊದಲ್ಗೊಂಡವು. ಯೇಸುವು ಬರುವದಕ್ಕೆ ಸುಮಾರು 1,500 ವರ್ಷಗಳ ಮುಂಚೆ ಧರ್ಮಶಾಸ್ತ್ರವು ಕೊಡಲ್ಪಟ್ಟ ಮುನ್ನ ಮತ್ತು ನಂತರ, ಆತನ ವಿಷಯವಾಗಿ ಅನೇಕ ಮಾತುಗಳು ಹೇಳಲ್ಪಟ್ಟವು. ಯೇಸು ತನ್ನ ಜೀವನ ಮತ್ತು ಬೋಧನೆಯ ಮೂಲಕ ಪ್ರವಾದನೆಗಳ ಒಟ್ಟಾರೆಯಾದ ಚಿತ್ರಣವನ್ನು ಕೊಡುವ ತನಕ ಇವುಗಳನ್ನು ಅರ್ಥಮಾಡಿಕೊಳ್ಳುವದು ಹೆಚ್ಚುಕಡಿಮೆ ಅಸಾಧ್ಯದ ಮಾತಾಗಿತ್ತು (ಲೂಕ 24:44). ನಿಜವಾಗಿಯೂ, ದೇವರ ರಕ್ಷಣೆಯ ಯೋಜನೆಯಲ್ಲಿ ಆತನ ಪಾತ್ರವು ಹಿಂದಿನ ಅನೇಕ ತಲೆಮಾರುಗಳಿಂದಲೂ ಮರೆಯಾಗಿಡಲ್ಪಟ್ಟಿದ್ದಂಥ ಮರ್ಮವಾಗಿತ್ತು.

### "ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ" (1:26)

ಹಿಂದಿನ ಕಾಲದಲ್ಲಿ ಮರ್ಮವು ಮರೆಯಾಗಿತ್ತು, ಆದರೆ ಈಗ ಅದು ತಿಳಿಸಲ್ಪಟ್ಟಿದೆ. ದೇವರು ಅದನ್ನು ತನ್ನ ಸ್ವಂತ ವೇಳಾಪಟ್ಟಿಗೆ ಅನುಗುಣವಾಗಿ ಪ್ರಕಟಗೊಳಿಸಿದನು (ಗಲಾತ್ಯ 4:4). ಈಗ ಅದು ಅರ್ಥಮಾಡಿಕೊಳ್ಳಬಹುದಾದ ಸತ್ಯವಾಗಿರುತ್ತದೆ.

ಶುಭವಾರ್ತೆಯ ತಿರುಳು ಸ್ವತಃ ಯೇಸುವಿನಲ್ಲಿಯೇ ಅಡಗಿಸಲ್ಪಟ್ಟಿತ್ತು ಮತ್ತು ಮರೆಯಾಗಿತ್ತು (1 ತಿಮೊಥೆ 3:16; ಎಫೆಸ 3:4-6). ಆತನ ಬರೋಣವು ಇಸ್ರಾಯೇಲ್ಯರಿಗೆ ಆಶೀರ್ವಾದ ಉಂಟು ಮಾಡುವದು ಮಾತ್ರವಲ್ಲದೆ, ಅದು ಅನ್ಯಜನರು ಸೇರಿದಂತೆ ಎಲ್ಲಾ ಜನರಿಗೂ ಆಶೀರ್ವಾದವನ್ನು ತರುವದಾಗಿತ್ತು. ಈ ಸತ್ಯದ ವಿಷಯವಾಗಿ ಹಳೆಯ ಒಡಂಬಡಿಕೆಯ ಹಲವಾರು ಹೇಳಿಕೆಗಳು ಸುಳಿವು ಕೊಟ್ಟಿರುತ್ತವೆ.[9]

ಹೊಸ ಒಡಂಬಡಿಕೆಯ ಮೂಲಕ, ಮರ್ಮವು ದೇವಜನರಿಗೆ ತಿಳಿಸಲ್ಪಟ್ಟಿರುತ್ತದೆ. ಸುವಾರ್ತೆಯು ತಿಳಿಸಿದ ಮರ್ಮವನ್ನು ತಿಳಿಯಲು ಶಕ್ತರಾದವರು ಕೊಲೊಸ್ಸೆಯವರು ಮಾತ್ರವೇ ಆಗಿರಲಿಲ್ಲ, ಯಾಕೆಂದರೆ ಅದು ಈಗ ಇಡೀ ಲೋಕದಲ್ಲಿ ಸಾರಲ್ಪಡುತ್ತಿತ್ತು (ಮಾರ್ಕ 16:15). ದೇವಜನರೇ ಆ ಮರ್ಮವನ್ನು ಅರ್ಥಮಾಡಿಕೊಂಡವರಾಗಿದ್ದಾರೆ. ಅದು ಅವರಿಗೆ ವೈಯಕ್ತಿಕವಾಗಿ ಮತ್ತು ನೇರವಾಗಿ ಪ್ರಕಟಗೊಳಿಸಲ್ಪಟ್ಟಿರಲಿಲ್ಲ. ಮರ್ಮವು ಪವಿತ್ರಾತ್ಮನ ಮೂಲಕ ಅಪೊಸ್ತಲರಿಗೂ ಪ್ರವಾದಿಗಳಿಗೂ ಪ್ರಕಟಗೊಳಿಸಲ್ಪಟ್ಟಿತು (ಎಫೆಸ 3:3-5). ಪ್ರತಿಯಾಗಿ, ಅವರು ಈ ಪ್ರಕಟಗೊಂಡ ಮರ್ಮವನ್ನು ತಮಗೆ ಪವಿತ್ರಾತ್ಮನು ಕಲಿಸಿದ ವಾಕ್ಯಗಳಲ್ಲಿ ಬೇರೆಯವರಿಗೆ ತಿಳಿಯಪಡಿಸಿದರು (1 ಕೊರಿಂಥ 2:9-13).

ಕೆಲವರು 1 ಕೊರಿಂಥ 2:14, 15 ವಚನಗಳಿಂದ ತೀರ್ಮಾನಕ್ಕೆ ಬಂದಿರುವದೇನೆಂದರೆ ಇಂದು ಪವಿತ್ರಾತ್ಮನ ಸಹಾಯವಿಲ್ಲದೆ ವಾಕ್ಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ

ಎಂಬದೆ. ಕ್ರೈಸ್ತೇತರರು ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳಲು ಅಶಕ್ತರು ಎಂಬದಾಗಿ ಪೌಲನು ಹೇಳಲಿಲ್ಲ. ಬದಲಾಗಿ, ಆತನು ಬರೆದದ್ದೇನೆಂದರೆ "ಪ್ರಾಕೃತ ಮನುಷ್ಯನು" ಪವಿತ್ರಾತ್ಮನ ಸಂಗತಿಗಳನ್ನು ಅಂಗೀಕರಿಸಿಕೊಳ್ಳುವದಿಲ್ಲ ಯಾಕೆಂದರೆ ಅವುಗಳು ಆತನಿಗೆ ಅರ್ಥವಾಗದವುಗಳಾಗಿರುತ್ತವೆ ಎಂಬದೆ. ಆತನಿಗಾದರೋ ಅವುಗಳು ಹುಚ್ಚುಮಾತಾಗಿರುವದರಿಂದ, ಆತನು ಅವುಗಳನ್ನು ಅರ್ಥಮಾಡಿಕೊಳ್ಳಬೇಕೆಂಬ ಸರಿಯಾದ ಮನಃಸ್ಥಿತಿಯಿಂದ ಓದುವದಿಲ್ಲ (1 ಕೊರಿಂಥ 1:18, 23).

ನಾಶನದಲ್ಲಿರುವವರಿಂದ ದೇವರ ವಾಕ್ಯವು ಅರ್ಥಮಾಡಿಕೊಳ್ಳಲ್ಪಡದಿದ್ದಲ್ಲಿ, ಅವರು ಅದನ್ನು ಓದುವ ಅಥವಾ ಸಾರಲ್ಪಡುವದನ್ನು ಕೇಳಿಸಿಕೊಳ್ಳುವ ಅಗತ್ಯವೇ ಇರುವದಿಲ್ಲ ಎಂದಾಗುತ್ತದೆ. ಸುವಾರ್ತೆಯು (ಎಫೆಸ 1:13) ನಾಶನದಲ್ಲಿರುವವರಿಗೆ ಸಾರಲ್ಪಡತಕ್ಕದ್ದು ಯಾಕೆಂದರೆ ಅವರ ರಕ್ಷಣೆಗೆ ಅಗತ್ಯವಾದ ಏಕೈಕ ಮೂಲವು ಅದರ ಸಂದೇಶದಲ್ಲಿ ಇರುತ್ತದೆ (ಅಪೊಸ್ತಲರ ಕೃತ್ಯಗಳು 11:14; ರೋಮಾ 1:16). ಹೇಗೂ, ನಾಶನ ಮಾರ್ಗದಲ್ಲಿರುವವರೆಲ್ಲರೂ ಅದನ್ನು ಸ್ವೀಕರಿಸಿಕೊಳ್ಳುವದಿಲ್ಲ ಯಾಕೆಂದರೆ ಅವರಿಗೆ ಆತ್ಮೀಕ ಸಂಗತಿಗಳಲ್ಲಿ ಆಸಕ್ತಿಯು ಇರುವದಿಲ್ಲ (ಮತ್ತಾಯ 7:13, 14).

## "ಅನ್ಯಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸುಮಾಡಿಕೊಂಡನು" (1:27)

**ಅನ್ಯಜನರು** (ἔθνη, *ethnē*, ಎಂಬುದು ಆಂಗ್ಲದ "ethnic" ಪದದಿಂದ ಬಂದದ್ದಾಗಿದೆ) ಎಂಬುದರ ಅರ್ಥವು "ಜನಗಳು" ಅಥವಾ "ಜನಾಂಗಗಳು" ಎಂದಾಗಿರುತ್ತದೆ. ಇಸ್ರಾಯೇಲ್ಯರು ತಮ್ಮನ್ನು ದೇವರ ಏಕ ಸತ್ಯವಾದ ಪ್ರಜೆಗಳು ಎಂದು ಪರಿಗಣಿಸಿಕೊಂಡಿದ್ದರು. ಭೂಮಿಯಲ್ಲಿನ ಮಿಕ್ಕ ಜನರೆಲ್ಲರೂ ಸೇರಿ "ಜನಾಂಗಗಳು" – ಅಂದರೆ, ಅನ್ಯಜನರು ಆಗಿದ್ದರು, ಅವರು ದೇವರ ಪ್ರಜೆಗಳಾಗಿರಲಿಲ್ಲ (ನೋಡಿರಿ ಯಾಜಕಕಾಂಡ 26:45; ಯೆಹೆಜ್ಕೇಲ 5:8). ಇಸ್ರಾಯೇಲ್ಯರು ಅರ್ಥಮಾಡಿಕೊಳ್ಳಲಾಗದ ಮರ್ಮವು ಏನಾಗಿತ್ತೆಂದರೆ, ದೇವರ ಯೋಜನೆಗೆ ಅನುಗುಣವಾಗಿ, ಒಂದು ದಿನ ಅನ್ಯಜನರು ಆತನ ಪ್ರಜೆಗಳಾಗಿ ಅಂಗೀಕರಿಸಿಕೊಳ್ಳಲ್ಪಡುವರು ಎಂಬದೇ. ಇಸ್ರಾಯೇಲ್ಯರ ಕಣ್ಣುಗಳು ಮಂದಗೊಳಿಸಲ್ಪಟ್ಟಿರದಿದ್ದರೆ ಅವರು ಈ ಸಂಗತಿಯನ್ನು ಗ್ರಹಿಸಿಕೊಳ್ಳಲು ಶಕ್ತರಾಗಿದ್ದಿರುತ್ತಿದ್ದರು (2 ಕೊರಿಂಥ 3:14). ದೇವರು ಅಬ್ರಹಾಮನಿಗೆ ಆತನ ಸಂತಾನದ ಮೂಲಕ, ಕೇವಲ ಆತನ ಸಂತತಿಯರು ಮಾತ್ರವಲ್ಲದೆ, ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವರೆಂದು ಹೇಳಿದನು (ಆದಿಕಾಂಡ 12:3; 22:18). ಇಸ್ರಾಯೇಲ್ ಜನಾಂಗದ ಮುಖಾಂತರ, ದೇವರು ಅನ್ಯಜನಾಂಗಗಳ ಮಧ್ಯದಲ್ಲಿ ಸ್ತುತಿಸಲ್ಪಡಲಿದ್ದನು (ಕೀರ್ತನೆ 18:49; 117:1).

**ಮಹಿಮಾತಿಶಯವು** ಎಂಬುದು ಪೌಲನಿಂದ ಹಲವಾರು ಸಾರಿ ವ್ಯಕ್ತಗೊಳಿಸಲ್ಪಟ್ಟ ಭಾವನೆಯಾಗಿರುತ್ತದೆ (ನೋಡಿರಿ ರೋಮಾ 9:23; ಫಿಲಿಪ್ಪಿ 4:19). ಆತನು ಈ ಪದವನ್ನು ಕ್ರೈಸ್ತರಿಗೆ ಲಭ್ಯಗೊಳಿಸಲ್ಪಟ್ಟಿರುವ ಆಶೀರ್ವಾದಗಳ "ಅಪಾರತೆ"ಗೆ ಅನ್ವಯಗೊಳಿಸುತ್ತಾನೆ (ರೋಮಾ 2:4; ಎಫೆಸ 1:7).

### “ಈ ಮರ್ಮವು ಏನೆಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ” (1:27)

ಮುಂದಿನ ಪದಗುಚ್ಛವು ಪೌಲನು ಚರ್ಚಿಸುತ್ತಿದ್ದ ಈ ಮರ್ಮದ ಮಹಿಮಾತಿಶಯವನ್ನು ಗುರುತಿಸುತ್ತದೇ: **ಈ ಮರ್ಮವು ಏನೆಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ**. ಕೊಲೊಸ್ಸೆಯವರ ಪ್ರಭಾವದ ಮಹಿಮಾತಿಶಯವು ಕ್ರಿಸ್ತನು ಅವರಲ್ಲಿರುವದರ ಮೇಲೆ ಅವಲಂಭಿತವಾಗಿತ್ತು. ಕ್ರಿಸ್ತನು ಒಳಗೆ ನೆಲೆಸಿರುವ ಭಾವನೆಯು ಹೊಸ ಒಡಂಬಡಿಕೆಯಲ್ಲಿ ಬೇರೆ ಕಡೆ ಕಾಣಿಸಿಕೊಳ್ಳುತ್ತದೆ (ಯೋಹಾನ 17:23; ರೋಮಾ 8:10; 2 ಕೊರಿಂಥ 13:5; ಗಲಾತ್ಯ 2:20; 4:19). ಯಾರು ತನ್ನ ವಾಕ್ಯಗಳಿಗೆ ವಿಧೇಯರಾಗುತ್ತಾರೋ ಅವರ ಬಳಿಯಲ್ಲಿ ತಾನು ಮತ್ತು ತಂದೆಯು ಬಂದು ಬಿಡಾರಮಾಡಿಕೊಳ್ಳುವರೆಂದು ಯೇಸು ಹೇಳಿದನು (ಯೋಹಾನ 14:23). ಕ್ರಿಸ್ತನು ನಂಬಿಕೆಯ ಮೂಲಕವಾಗಿ ಕ್ರೈಸ್ತರ ಹೃದಯಗಳಲ್ಲಿ ವಾಸಿಸುತ್ತಾನೆ (ಎಫೆಸ 3:17). ಪವಿತ್ರಾತ್ಮನು ಕ್ರಿಸ್ತನ ಆತ್ಮನಾಗಿದ್ದು ಯೇಸುವು ಕಾರ್ಯಮಾಡುವದಕ್ಕೆ ಮಧ್ಯವರ್ತಿಯಾಗಿದ್ದಾನೆ (1 ಪೇತ್ರ 1:11) ಮತ್ತು ಅಲ್ಲದೆ ಆತನ ಮೂಲಕವೇ ಆತನು ಕ್ರೈಸ್ತರೊಳಗೆ ವಾಸ ಮಾಡುತ್ತಾನೆ (ರೋಮಾ 8:9, 11; 1 ಕೊರಿಂಥ 3:16; 6:19; ಎಫೆಸ 2:22; 2 ತಿಮೊಥೆ 1:14). ಪವಿತ್ರಾತ್ಮನು ಪರಲೋಕದ ಬಾಧ್ಯತೆಗೆ ಒಂದು ಸಂಚಕಾರವಾಗಿ ಒದಗಿಸಲ್ಪಟ್ಟಿದ್ದಾನೆ (2 ಕೊರಿಂಥ 1:21, 22; ಎಫೆಸ 1:13, 14).

ಕ್ರಿಸ್ತನು ಯಾರ“ಲ್ಲಿ” ಇದ್ದಾನೋ ಅದು “ನಿಮ್ಮಲ್ಲಿ” ಎಂದು ಬಹುವಚನದಲ್ಲಿರುತ್ತದೆ. ಯೇಸು ಒಂದು ಗುಂಪಾಗಿರುವ ತನ್ನ ಜನರಲ್ಲಿದ್ದಾನೆ ಮತ್ತು ಅವರಲ್ಲಿ ವೈಯಕ್ತಿಕವಾಗಿ ಸಹ ಇರುತ್ತಾನೆ. “ಪ್ರಭಾವ” ಎಂದು ಹೇಳಿದಾಗ, ಪೌಲನು ಕೊಲೊಸ್ಸೆಯವರಿಗೆ ದೊರೆಯಲಿದ್ದ ಅಂತಿಮ ಪ್ರತಿಫಲವನ್ನು ಸೂಚಿಸಿ ಹೇಳಿದನು. ಕ್ರೈಸ್ತರು ಒಂದು ದಿನ ಪರಲೋಕದಲ್ಲಿ ಜೀವಿಸುವದನ್ನು ಎದರು ನೋಡಬಹುದಾಗಿದೆ (2 ಕೊರಿಂಥ 5:1; 1 ಪೇತ್ರ 1:3, 4).

## ಅವರಿಗೋಸ್ಕರ ಇರುವ ಗುರಿ:<br>ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದು (1:28, 29)

**28ನಾವು ಆತನನ್ನು ಪ್ರಸಿದ್ಧಿಪಡಿಸುವವರಾಗಿ ಸಕಲರಿಗೂ ಬುದ್ಧಿ ಹೇಳುತ್ತಾ ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತಾ ದೇವರ ಮುಂದೆ ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ. 29ನನ್ನಲ್ಲಿ ಕಾರ್ಯಸಾಧಿಸುವ ದೇವರ ಬಲವನ್ನು ಪ್ರಯೋಗಮಾಡಿ ಇದಕ್ಕೋಸ್ಕರವೇ ಹೋರಾಡುತ್ತೇನೆ, ಪ್ರಯಾಸಪಡುತ್ತೇನೆ.**

### “ನಾವು ಆತನನ್ನು ಪ್ರಸಿದ್ಧಿಪಡಿಸುವವರಾಗಿ” (1:28)

ಪೌಲನು ತನ್ನನ್ನು ಮತ್ತು ತಿಮೊಥೆಯನನ್ನು ಸೂಚಿಸಿ ಹೇಳಿದನೋ, ಅಥವಾ ಆತನು ಸಂಪಾದಕೀಯ **ನಾವು** ಎಂಬುದನ್ನು ಬಳಸಿದನೋ? ಒಂದು ಖಚಿತವಾದ ಉತ್ತರವನ್ನು ಹೇಳುವದು ಸಾಧ್ಯವಿರುವದಿಲ್ಲ. ಆತನು ವ್ಯಕ್ತಪಡಿಸುವ ರೀತಿಯು, ಒಬ್ಬ ಲೇಖಕನು ತಾನೊಬ್ಬನೇ ಬರೆಯುತ್ತಿದ್ದಾಗ್ಯೂ, “ನಾವು ಈ ರೀತಿಯ ಆಲೋಚನೆಯನ್ನು ಆಕ್ಷೇಪಿಸುತ್ತೇವೆ” ಎಂದು ಹೇಳುವ ಹಾಗಿರುತ್ತದೆ. ಬಹುಶಃ ಪೌಲನು ತನ್ನನ್ನು ಮತ್ತು

ವಿಶ್ವಾಸಿಸದ ಲೋಕಕ್ಕೆ ಯೇಸುವನ್ನು ಸಾರುತ್ತಿದ್ದ ಇತರ ಎಲ್ಲರನ್ನೂ ಸೂಚಿಸಿ ಹೇಳುತ್ತಿದ್ದಿರಬಹುದಾಗಿದೆ. ಇನ್ನೊಂದೆಡೆಯಲ್ಲಿ, ಮುಂದಿನ ವಚನದಲ್ಲಿ ಆತನು "ನನ್ನಲ್ಲಿ" ಎಂದು ಬಳಸುವದು ಹಿಂದೆ ಆತನು "ನಾವು" ಎಂದು ಬರೆದಾಗ ತನ್ನೊಬ್ಬನನ್ನೇ ಸೂಚಿಸಿ ಹೇಳಿದನೆಂಬದನ್ನು ತೋರ್ಪಡಿಸುತ್ತದೆ.

ಪೌಲನು ಬೋಧನೆಯಲ್ಲಿ (1 ಕೊರಿಂಥ 2:1, 2) ಮತ್ತು ಇತರರ ಬೋಧನೆಯಲ್ಲಿ ಯೇಸುವೇ ಹೃದಯಭಾಗವಾಗಿದ್ದನು (ಅಪೊಸ್ತಲರ ಕೃತ್ಯಗಳು 8:5, 35). ಮೂಲಭೂತ ಸಂದೇಶವು – ಕ್ರಿಸ್ತನ ಶಿಲುಬೆ – ಲೋಕಕ್ಕೆ ಹುಚ್ಚುಮಾತಾಗಿ ತೋರಬಹುದಾದರೂ (1 ಕೊರಿಂಥ 1:18), ಅದು ದೇವರ ಜ್ಞಾನದ (σοφία, *sophia*) ವಿಷಯವಾದ ಪ್ರಕಟನೆಯ ಮೇಲೆ ಆಧಾರವಾಗಿರುತ್ತದೆ (1 ಕೊರಿಂಥ 1:24; ಅಲ್ಲದೆ ಕೊಲೊಸ್ಸೆ 1:9ನ್ನು ಸಹ ನೋಡಿರಿ).

ಪೌಲನು ತಾನು ಇತರರಿಗೆ ಬೋಧನೆ ಮತ್ತು ಬುದ್ಧಿವಾದ ಹೇಳುವದಕ್ಕೆ ಅನುಸರಿಸುತ್ತಿದ್ದ ದಾರಿಯ ಬಗ್ಗೆ 1 ಥೆಸಲೋನಿಕ 2:3-12ರಲ್ಲಿ ತಿಳಿಯಪಡಿಸುತ್ತಾನೆ. ಆತನು ಧೈರ್ಯದಿಂದ ಸಾರುತ್ತಿದ್ದನು, ಆತನು ಮೋಸತನವ ನ್ನಾಗಲಿ, ಮನುಷ್ಯರ ಮೆಚ್ಚಿಸುವಿಕೆ, ಮುಖಸ್ತುತಿ ಅಥವಾ ವ್ಯರ್ಥವಾದ ಮಾನವನ್ನು ಅಪೇಕ್ಷಿಸುವದನ್ನಾಗಲಿ ಮಾಡಲಿಲ್ಲ (ವಚನಗಳು 3-6). ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುವ ವೇಳೆ, ಆತನು ಸಹೋದರರೆಡೆಗೆ ವಾತ್ಸಲ್ಯವುಳ್ಳ ತಾಯಿಯಂತೆಯೂ ಬುದ್ಧಿಹೇಳುವ ತಂದೆಯಂತೆಯೂ ನಡೆದುಕೊಂಡನು, ಯಾಕೆಂದರೆ ಅವರು ಆತನಿಗೆ ಬಹಳ ಪ್ರಿಯರಾಗಿದ್ದನು (ವಚನಗಳು 7-11). ಕೆಲವು ಸಂದರ್ಭಗಳಲ್ಲಿ ಆತನಿಗಿದ್ದ ಅತ್ಯಾಸಕ್ತಿಯ ಕಾಳಜಿಯಿಂದಾಗಿ ಬುದ್ಧಿಹೇಳುವ ಸಮಯದಲ್ಲಿ ಕಣ್ಣೀರಿಡುವಂತಾಗಿತ್ತು (ಅಪೊಸ್ತಲರ ಕೃತ್ಯಗಳು 20:19, 31; 2 ಕೊರಿಂಥ 2:4; ಫಿಲಿಪ್ಪಿ 3:18).

## "ಸಕಲರಿಗೂ ಬುದ್ಧಿ ಹೇಳುತ್ತಾ ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತಾ" (1:28)

**ಸಕಲರಿಗೂ** ಎಂದು ಬರೆಯುವ ಮೂಲಕ, ಪೌಲನು ಸುವಾರ್ತೆಯ ಸಾರ್ವತ್ರೀಕತೆಯ ಬಗ್ಗೆ ಒತ್ತಿ ಹೇಳುತ್ತಾನೆ. ಅದು ಪ್ರತಿಯೊಬ್ಬನಿಗಾಗಿಯೂ ಇರುತ್ತದೆ ಮತ್ತು ಅದನ್ನು ಎಲ್ಲರೂ ಅಂಗೀಕರಿಸಿಕೊಳ್ಳದಿದ್ದಾಗ್ಯೂ, ಅದು ಯಾರೊಬ್ಬನನ್ನು ಹೊರಗೆ ಇಟ್ಟಿರುವವದಿಲ್ಲ (ರೋಮಾ 10:16; 2 ಥೆಸಲೋನಿಕ 1:8). "ಮನುಷ್ಯ" (ἄνθρωπος, *anthrōpos*, "ಮಾನವರು") ಎಂಬ ಪದದ ಅರ್ಥವು ಪುರುಷರು ಮತ್ತು ಸ್ತ್ರೀಯರು ಇಬ್ಬರೂ ಎಂದಾಗಿರುತ್ತದೆ. ಪೌಲನ ಪುರುಷರು ಮಾತ್ರವೇ ಎಂಬರ್ಥದಲ್ಲಿ ಹೇಳಿದ್ದಿದ್ದರೆ, ಆತನು 1 ಕೊರಿಂಥ 11:7-9ರಲ್ಲಿ ಪ್ರತ್ಯೇಕವಾಗಿ ಸೂಚಿಸಿ ಹೇಳಲ್ಪಟ್ಟಿರುವ ರೀತಿಯಲ್ಲಿ, ἀνήρ (*anēr*) ಎಂಬ ಪದವನ್ನು ಬಳಸಿರುತ್ತಿದ್ದನು, ಅದರರ್ಥವು "ಗಂಡು" ಎಂದಾಗಿರುತ್ತದೆ. ಆತನು ಪುರುಷರು ಮತ್ತು ಸ್ತ್ರೀಯರು ಇಬ್ಬರೂ ಸೇರಿದಂತೆ, ಸಕಲರಿಗೂ ಪೂರ್ಣಜ್ಞಾನವನ್ನು ಉಪದೇಶಿಸಿದನು.

ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ಪ್ರವೀಣನಾಗುವ ಅಗತ್ಯತೆಯಿದೆ ಎಂಬುದನ್ನು ಪೌಲನು ಗುರುತಿಸಿದನು. ಆತನು ವಿಶ್ವಾಸಿಗಳ ಅಗತ್ಯತೆಗಳ ಬಗ್ಗೆ ಕ್ರಮಕೈಗೊಂಡಿದ್ದು ಮಾತ್ರವಲ್ಲದೆ, ಆತನು ವಿಶ್ವಾಸಿಗಳೇತರ ವಿಷಯದಲ್ಲಿ ಸಹ ಅದನ್ನೇ ಮಾಡಿದನು. ಆತನು ಇಬ್ಬರಿಗೂ ಒಂದು ಋಣ ಹೊಂದಿದ್ದನು: "ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ

ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಇದೆ" (ರೋಮಾ 1:14).

**ಬುದ್ಧಿ ಹೇಳುತ್ತಾ** ಎಂಬುದರಲ್ಲಿ ಜನರನ್ನು ಅನೈತಿಕತೆ, ಆತ್ಮೀಕವಲ್ಲದ ಜೀವನ ನಡಿಸುವದರ ಮತ್ತು ದೋಷಪೂರಿತ **ಉಪದೇಶ**ವನ್ನು ಹಿಂಬಾಲಿಸುವದರ ಬಗ್ಗೆ ಎಚ್ಚರಿಸುವದು ಮತ್ತು ಅದರ ದುಷ್ಪರಿಣಾಮಗಳ ಕುರಿತು ಎತ್ತಿ ತೋರಿಸುವದು ಎಂಬ ಯೋಚನೆಯು ಅಡಗಿರುತ್ತದೆ. ಅದು ಬೋಧನೆಗೆ ಒಂದು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ದಾರಿಗಳನ್ನು ಅನುಸರಿಸುವದನ್ನು ಒಳಗೊಂಡಿರುತ್ತದೆ ಯಾಕೆಂದರೆ ಕ್ರೈಸ್ತರು ಸರಿಯಾದದ್ದನ್ನು ಮಾಡುವದರ ಜೊತೆಗೆ ತಮ್ಮ ಜೀವಿತಗಳಿಂದ ಯಾವುದ ತಪ್ಪೋ ಅದನ್ನು ಅಳಿಸಿ ಹಾಕುವದು ಸಹ ಅಗತ್ಯವಿರುತ್ತದೆ. ನೀತಿಯ ಜೀವಿತಗಳನ್ನು ನಡಿಸುವದರ ಮೇಲೆ ಒತ್ತು ಇರಬೇಕಾಗಿರುತ್ತಾದರೂ, ಕೆಟ್ಟದ್ದರಿಂದ ದೂರವಿರಬೇಕಾಗಿರುವದರ ಪ್ರಾಮುಖ್ಯತೆಯನ್ನು ಸಹ ನಿರ್ಲಕ್ಷಿಸಬಾರದು.

ಯೇಸುವಿಗೆ "ಮಾಡಬೇಡಿರಿ" ಎಂದು ಹೇಳುವದಕ್ಕೆ ಯಾವದೇ ಸಂಕೋಚವಿರಲಿಲ್ಲ. ಪರ್ವತದ ಮೇಲಿನ ಪ್ರಸಂಗದಲ್ಲಿ, ಆತನು ತನ್ನ ಶ್ರೋತೃಗಳಿಗೆ ಏನು ಮಾಡಬೇಕು ಎಂಬುದನ್ನು ಹೇಳಿದನು, ಆದರೆ ಆತನು ಅವರು ಏನು ಮಾಡಬಾರದು ಎಂಬದರ ಬಗ್ಗೆ ಸಹ ಬೋಧಿಸಿದನು (ಮತ್ತಾಯ 5:34; 6:2, 3, 5, 16, 19, 25, 31, 34; 7:1, 6). ಕ್ರೈಸ್ತತ್ವವು ಬಹುಪಾಲು ಸಕಾರಾತ್ಮಕವಾದದ್ದು, ಆದರೆ ಅದು ಅಜ್ಞಾನದ ಮತ್ತು ಕೆಟ್ಟ ಆಚಾರಗಳಲ್ಲಿ ತೊಡಗಿಸಿಕೊಳ್ಳುವ ವಿರುದ್ಧವಾಗಿ ಎಚ್ಚರಿಕೆಗಳನ್ನು ಸಹ ಹೊಂದಿರುತ್ತದೆ.

ಯೇಸುವಿನ ಬೋಧನೆಗಳು ದೇವರ **ಜ್ಞಾನ**ದ ಮೇಲೆ ಆಧಾರವಾಗಿರುತ್ತವೆ. ಪೌಲನು ಮಾನುಷಜ್ಞಾನದ ಬದಲಾಗಿ (1 ಕೊರಿಂಥ 2:13) ದೇವರ ಜ್ಞಾನದ ಬಗ್ಗೆ ತಿಳಿಯಪಡಿಸಿದನು (1 ಕೊರಿಂಥ 1:24, 30; 2:7). ಆತನು ವಾಕ್ಚಾತುರ್ಯದಿಂದಾಗಲಿ ಜ್ಞಾನಾಡಂಬರದಿಂದಾಗಲಿ ಮನವೊಲಿಸುವದಕ್ಕೆ ಅಪೇಕ್ಷಿಸಲಿಲ್ಲ; ಆತನು ಕೇವಲ ದೇವರ ಸಂದೇಶವನ್ನಷ್ಟೆ ಮುಂದಿಟ್ಟನು (1 ಕೊರಿಂಥ 2:1-5).

## "ದೇವರ ಮುಂದೆ ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ" (1:28)

ಪೌಲನು ಸಾರುವದಕ್ಕೆ ಮತ್ತು ಬುದ್ಧಿವಾದ ಹೇಳುವದಕ್ಕೆ ಕಾರಣವು ಕೊಡಲ್ಪಟ್ಟಿದೆ. ಪುನಃ, ಪೌಲನು ಪ್ರಥಮ ಪುರುಷ ಬಹುವಚನವನ್ನು (**ತ್ತಿದ್ದೇವೆ**) ಬಳಸಿ ಮುಂದಿನ ವಚನದಲ್ಲಿ ಮತ್ತೊಮ್ಮೆ ಪ್ರಥಮ ಪುರುಷ ಏಕವಚನಕ್ಕೆ ("ನನ್ನಲ್ಲಿ") ಹಿಂದಿರುಗುತ್ತಾನೆ. ಪರಿಪೂರ್ಣರಾದ ಮತ್ತು ಪ್ರವೀಣರಾದ ಕ್ರೈಸ್ತರನ್ನು ಅಭಿವೃದ್ಧಿಪಡಿಸುವದಕ್ಕೆ ಪೌಲನು ಬುದ್ಧಿಹೇಳುವಿಕೆ ಮತ್ತು ಬೋಧಿಸುವಿಕೆಯಲ್ಲಿ ಎರಡು ವಿಧವಾದ ದಾರಿಗಳನ್ನು ಅನುಸರಿಸುತ್ತಾನೆ. ಬೋಧಕರ ಉದ್ದೇಶವು ಕ್ರಿಸ್ತನಲ್ಲಿ ಪ್ರವೇಶಿಸುವಂತೆ (ರೋಮಾ 6:3; ಗಲಾತ್ಯ 3:27) ಮತ್ತು ಆತನಲ್ಲಿ ಪೂರ್ಣ ಪ್ರವೀಣರಾಗುವಂತೆ ಜನರನ್ನು ಮನವೊಲಿಸುವದು. ಒಬ್ಬನನ್ನ ಕ್ರಿಸ್ತನ ಬಳಿಗೆ ಕರೆತರುವದು ಒಬ್ಬ ಬೋಧಕನ ಅಥವಾ ಉಪದೇಶಕನ ಕೆಲಸದ ಆರಂಭವಷ್ಟೆ ಆಗಿರುತ್ತದೆ. ಪ್ರವೀಣತೆಯೆಡೆಗೆ ಪ್ರಗತಿ ಹೊಂದುತ್ತಾ ಸಾಗುವದು ಯೇಸುವಿನ ಪ್ರತಿಯೊಬ್ಬ ಹಿಂಬಾಲಕನ ಗುರಿಯಾಗಿರತಕ್ಕದ್ದು (ಎಫೆಸ 4:11-13; ಇಬ್ರಿಯ 6:1).

ಪೌಲನು ಯಾವಾಗ ಅಥವಾ ಯಾರನ್ನು **ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ** ಎಂದು ಹೇಳಲಿಲ್ಲ. ಬಹುಶಃ ಆತನು ನ್ಯಾಯತೀರ್ಪಿನ

ದಿನದಂದು ಎಲ್ಲರೂ ಯೇಸುವಿನ ಮುಂದೆ ಕಾಣಿಸಿಕೊಳ್ಳುವಂಥ ಆ ದಿನವನ್ನು ಎದುರು ನೋಡುವವನಾಗಿದ್ದಿರಬೇಕು. ಆತನು ಸಹೋದರರ ವಿಷಯದಲ್ಲಿ ಯೇಸುವು ಹಿಂದಿರುಗಿ ಬರುವ ವೇಳೆ ಸಂತೋಷಿಸುವಂತಾಗುವ ಹಾಗೆ ಅವರು ಪ್ರತಿಯೊಂದು ಕ್ರೈಸ್ತ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಬಯಸಿದನು (1 ಥೆಸಲೋನಿಕ 2:19, 20). ಕೆಲವರು ನಾಶನಕ್ಕೆ ಹೋಗುವದನ್ನು ಆರಿಸಿಕೊಂಡಾಗ್ಯೂ ಮತ್ತು ಯಾರೊಬ್ಬರೂ ಪ್ರತಿಯೊಂದು ಕ್ರೈಸ್ತ ಗುಣಗಳನ್ನು ಪರಿಪೂರ್ಣವಾಗಿ ಬೆಳೆಸಿಕೊಳ್ಳದಿದ್ದಾಗ್ಯೂ, ಆತನು ತನ್ನ ಸೇವೆಯನ್ನು ಮಾಡುವದಕ್ಕೆ ಮತ್ತು ಪ್ರತಿಫಲವನ್ನು ಪಡೆದುಕೊಳ್ಳುವದಕ್ಕೆ ದೃಢತೀರ್ಮಾನವನ್ನು ಮಾಡಿಕೊಂಡಿದ್ದನು (1 ಕೊರಿಂಥ 3:12-15).

28ನೇ ವಚನದಲ್ಲಿರುವ ಗ್ರೀಕ್ ಪದ *teleios*ನ ಅನುವಾದ "ಪ್ರವೀಣ" ಎಂಬುದು 4:12ರಲ್ಲಿ ಇರುವಂತಹ "ಪರಿಪೂರ್ಣ" (*teleioi*, ಅದೇ ಮೂಲ ಪದದಿಂದ ಬಂದದ್ದು) ಎಂಬುದಕ್ಕಿಂತ ಉತ್ತಮವಾಗಿರುತ್ತದೆ. ಅದು ಮತ್ತಾಯ 19:21ರಲ್ಲಿ "ಸಂಪೂರ್ಣ" ಎಂದು ಅನುವಾದಿಸಲ್ಪಟ್ಟಿದೆ ಆದರೆ ಅದಕ್ಕೆ ಬೇರೊಂದು ಕಡೆಯಲ್ಲಿ "ಪರಿಪಕ್ವತೆ" ಎಂಬ ಅರ್ಥ ಕೊಡಲ್ಪಟ್ಟಿದೆ.[10] ಇತರ ವಾಕ್ಯಭಾಗಗಳಲ್ಲಿ ಅದು "ಪರಿಪೂರ್ಣ" ಎಂದು ಅನುವಾದಿಸಲ್ಪಟ್ಟಿದೆ; ಆದರೆ "ಪರಿಪಕ್ವ" ಅಥವಾ "ಸಂಪೂರ್ಣ" ಎಂಬುದು ಉತ್ತಮ ಅನುವಾದವಾಗುವದು. "ಪರಿಪೂರ್ಣ" ಎಂಬುದು ಅಪಾರ್ಥಕ್ಕೆ ನಡಿಸುವದಾಗಿದೆ. ಮಾನವರು ದೇವರ ಪರಿಪೂರ್ಣತೆಯನ್ನು ಹೊಂದಿಕೊಳ್ಳುವದಕ್ಕೆ ಸಾಧ್ಯವಿಲ್ಲ (ಮತ್ತಾಯ 5:48). ಪೌಲನು ಸಂಪೂರ್ಣವಾದದ್ದಕ್ಕೆ ವಿರುದ್ಧ ಅಸಂಪೂರ್ಣವಾದದ್ದನ್ನು ಹೋಲಿಕೆ ಮಾಡುತ್ತಿದ್ದಾನೆ (1 ಕೊರಿಂಥ 13:10). ಯಾವ ಕ್ರೈಸ್ತನಾದರೂ ಪರಿಪೂರ್ಣನೆಂದು ಆತನು ಪರಿಗಣಿಸಲಿಲ್ಲ (ಫಿಲಿಪ್ಪಿ 3:15), ಯಾವನಾದರೂ ಪರಿಪೂರ್ಣನಾಗಿರ ಬೇಕೆಂದು ಆತನು ಅಪೇಕ್ಷೆಯನ್ನಾಗಲಿ ಸಹ ಹೊಂದಿರಲಿಲ್ಲ (ಕೊಲೊಸ್ಸೆ 4:12). ಕ್ರೈಸ್ತರು ಪರಿಪೂರ್ಣರಾಗಿರಬೇಕೆಂದು ಯಾಕೋಬನು ನಿರೀಕ್ಷಿಸಲಿಲ್ಲ (ಯಾಕೋಬ 1:4; 3:2). ಒಬ್ಬ ಮಾನವ ಜೀವಿಯು ಪರಿಪೂರ್ಣ ಪ್ರೀತಿಯನ್ನು ಹೊಂದಿರುವದಕ್ಕೆ ಸಾಧ್ಯವೆಂದು ಯೋಹಾನನು ನಂಬಲಿಲ್ಲ (1 ಯೋಹಾನ 4:18).

ಆತ್ಮೀಕ ಸಂಪೂರ್ಣತೆ ಮತ್ತು ಪ್ರವೀಣತೆಗೆ ತಳಹದಿಯು ಪ್ರಭಾವದ ನಿರೀಕ್ಷೆಯಾಗಿರುವ ಕ್ರಿಸ್ತನು ನಮ್ಮಲ್ಲಿ ವಾಸವಾಗಿರುವದೇ ಆಗಿದೆ (ವ. 27). ಕ್ರಿಸ್ತನಲ್ಲಿರುವ ಆತ್ಮೀಕ ಪ್ರವೀಣತೆಯುಳ್ಳವರಾಗಿರಬೇಕೆಂದರೆ ಭಕ್ತಿಜೀವನದಲ್ಲಿ ವ್ಯಕ್ತಪಡಿಸಲ್ಪಡುವಂತಹ ಆಂತರಿಕ ಬೆಳವಣಿಗೆಯ ಅಗತ್ಯವಿರುತ್ತದೆ. ಒಬ್ಬ ಪೂರ್ಣ ಬೆಳವಣಿಗೆಗೊಂಡ ಕ್ರೈಸ್ತನು ಯೇಸುವಿನ ಬೋಧನೆಯ ಒಂದು ಅಂಶದಲ್ಲಿ ಎದ್ದುಕಾಣುವದಕ್ಕಿಂತಲೂ ಹೆಚ್ಚಿನದ್ದಾಗಿದೆ. ಆತನು ಪ್ರತಿಯೊಂದು ಸದ್ಗುಣದಲ್ಲಿ ಎಂದಿಗೂ ಪೂರ್ಣವಾಗಿ ಬೆಳವಣಿಗೆಗೊಳ್ಳದಿದ್ದಾಗ್ಯೂ, ಆತನು ಕ್ರೈಸ್ತ ಜೀವಿತದ ಮತ್ತು ಸೇವೆಯ ಎಲ್ಲಾ ಅಂಶಗಳಲ್ಲಿಯೂ ಆತ್ಮೀಕವಾಗಿ, ಸಿದ್ಧಾಂತಿಕವಾಗಿ, ಮತ್ತು ಸಾಮಾಜಿಕವಾಗಿ ಪ್ರವೀಣನಾಗಿದ್ದಲ್ಲಿ ಮಾತ್ರವೇ ಆತನು ಪೂರ್ಣವಾಗಿ ಬೆಳವಣಿಗೆಗೊಂಡವನಾಗುತ್ತಾನೆ.

### "ನನ್ನಲ್ಲಿ ಕಾರ್ಯಸಾಧಿಸುವ ದೇವರ ಬಲವನ್ನು ಪ್ರಯೋಗಮಾಡಿ ಇದಕ್ಕೋಸ್ಕರವೇ ಹೋರಾಡುತ್ತೇನೆ, ಪ್ರಯಾಸಪಡುತ್ತೇನೆ" (1:29)

ಪೌಲನ ಪ್ರಯಾಸಗಳಿಗೆ ಒಂದು ಉದ್ದೇಶವಿತ್ತು – **ಇದಕ್ಕೋಸ್ಕರವೇ**. ಆತನು

ಜನರನ್ನು ಪರಿವರ್ತಿಸುವದಕ್ಕೆ ಮತ್ತು ಅವರು ಇನ್ನು ಮೇಲೆ ಪಕ್ವತೆಯಿಲ್ಲದ ಕ್ರೈಸ್ತರಾಗಿರದ ಹಾಗೆ ಅವರನ್ನು ಕ್ರಿಸ್ತನ ಸ್ವಾರೂಪ್ಯವುಳ್ಳವರಾಗುವಂತೆ ಮಾಡುವದಕ್ಕೆ ಸಮರ್ಪಣೆ ಹೊಂದಿದವನಾಗಿದ್ದನು (ಎಫೆಸ 4:13-15).

**ಪ್ರಯಾಸಪಡುತ್ತೇನೆ** ಎಂದು ಹೇಳುವ ಮೂಲಕ, ಪೌಲನು ಯೇಸುವಿಗಾಗಿ ತನ್ನನ್ನು ತೊಡಗಿಸಿಕೊಂಡಿರುವ ಕಠಿಣ ಪರಿಶ್ರಮವನ್ನು ಸೂಚಿಸುತ್ತಾನೆ. **ಹೋರಾಡುತ್ತೇನೆ** (ἀγωνιζόμενος, *agōnizomenos*) ಎಂಬುದರಲ್ಲಿ ನೋವುಕರವಾದ, ವೇದನೆಯಿಂದ ಕೂಡಿದ ಪ್ರಯಾಸ ಎಂಬ ಯೋಚನೆ ಸೇರಿರುತ್ತದೆ. ಅದು ಅಕ್ಷರಶಃ ಹೋರಾಟವನ್ನು ಸೂಚಿಸಿ (ಯೋಹಾನ 18:36) ಮತ್ತು, ಸಾಂಕೇತಿಕವಾಗಿ ಕ್ರೀಡಾ ಸ್ಪರ್ಧೆಯನ್ನು ಸೂಚಿಸಿ (1 ಕೊರಿಂಥ 9:25) ಮತ್ತು ಕ್ರೈಸ್ತ ಜೀವನವನ್ನು ಸೂಚಿಸಿ ಪೌಲನಿಂದ ಬಳಸಲ್ಪಟ್ಟಿರುತ್ತದೆ (1 ತಿಮೊಥೆ 6:12; 2 ತಿಮೊಥೆ 4:7).

ಒಂದು ಹೆಚ್ಚು ಅಕ್ಷರಶಃ ಅನುವಾದವು ಹೀಗಿರಲಿದೆ, ". . . ಬಲದಿಂದ ನನ್ನನ್ನು ಶಕ್ತಿ ತುಂಬುತ್ತಿರುವ ಆತನ ಶಕ್ತಿಯ ಪ್ರಕಾರವಾಗಿ ಹೋರಾಡುತ್ತಿದ್ದೇನೆ." ನಾಮ ಪದವಾದ **ಬಲ** (ἀνέργεια, *energeia,* "ಶಕ್ತಿ") ಎಂಬುದು ಮತ್ತು ಕೃದಂತವಾದ **ಕಾರ್ಯಸಾಧಿಸುವ** (ἐνεργουμένην, *energoumenēn,* "ಶಕ್ತಿಗೊಳಿಸುವ") ಎಂಬುದು ಇಚ್ಛಾಪೂರ್ವಕವಾದ ಶಬ್ದಾಡಂಬರದ ಬಳಕೆಯಾಗಿರಬಹುದಾಗಿದೆ. ಅವೆರಡನ್ನು ಒಟ್ಟಿಗೆ ಬಳಸಲ್ಪಡುವದು ಪೌಲನಲ್ಲಿ ಕಾರ್ಯಸಾಧಿಸುತ್ತಿದ್ದ ಶಕ್ತಿ ಮತ್ತು ಬಲದ ಮೂಲದ ಬಗ್ಗೆ ಒತ್ತಿ ಹೇಳುತ್ತದೆ. ಪೌಲನಲ್ಲಿ ಕಾರ್ಯಸಾಧಿಸುತ್ತಿದ್ದ ಬಲವು ಯೇಸುವಿನಿಂದ ಬಂದದ್ದಾಗಿತ್ತು, ಆತನು ಪವಿತ್ರಾತ್ಮನ ಮೂಲಕವಾಗಿ ಎಲ್ಲಾ ಕ್ರೈಸ್ತರನ್ನು ಬಲಪಡಿಸುವವನಾಗಿದ್ದಾನೆ (ಎಫೆಸ 3:16).

**ಬಲ** ಎಂಬುದರ ಅನುವಾದಿತ ಗ್ರೀಕ್ ಪದವು δύναμις (*dunamis*) ಎಂಬುದು. ಪೌಲನು, ಇತರ ಅಪೊಸ್ತಲರಂತೆಯೇ, ಮಾನವ ಮಧ್ಯಸ್ಥಿಕೆಯಿಲ್ಲದೆಯೆ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿಕೊಂಡನೆಂಬುದ ಸ್ಪಷ್ಟವಾಗಿರುತ್ತದೆ. ಇದು ಅದ್ಭುತಗಳನ್ನು ನಡಿಸುವಂತೆ ಆತನನ್ನು ಶಕ್ತಗೊಳಿಸಿತು (2 ಕೊರಿಂಥ 12:12). ಯೇಸು ಅಪೊಸ್ತಲರ ಕೃತ್ಯಗಳು 1:8ರಲ್ಲಿ ಇತರ ಅಪೊಸ್ತಲರಿಗೆ ವಾಗ್ದಾನ ಮಾಡಿದ್ದ ಅದೇ ಶಕ್ತಿಯನ್ನು ಪೌಲನು ಹೊಂದಿದ್ದನು. ಈ "ಬಲ" ಎಂಬುದನ್ನು ಶಾರೀರಕದಂತೆಯೇ ಆತ್ಮೀಕವಾದ ಬಲವೆಂಬಂತೆ ಪರಿಗಣಗಿಸಬಾರದು. ಪೌಲನ ಶರೀರವು ಬಲಹೀನಗೊಳ್ಳುತ್ತಾ ಸಾಗಿತ್ತು, ಆದರೆ ಆತನ ಆಂತರ್ಯವು ದಿನೇ ದಿನೇ ಹೊಸದಾಗುತ್ತಾ ಸಾಗಿತ್ತು (2 ಕೊರಿಂಥ 4:16).

# ಅನ್ವಯಿಸುವಿಕೆ

## ಸಿದ್ಧಮನಸ್ಸುಳ್ಳ ಸೇವಕರು

ಪೌಲನು ಸಮರ್ಪಣೆಯನ್ನು ತೋರಿಸಿದನು, ಅದು ಆತನನ್ನು ಕ್ರಿಸ್ತನ ಒಬ್ಬ ಶ್ರೇಷ್ಠ ಸೇವಕನನ್ನಾಗಿ ಮಾಡಿತು, ನಮಗಾಗಿ ಒಂದು ಉತ್ತಮವಾದ ಮಾದರಿಯಾಗಿ ನಿಲ್ಲಿಸಿರುತ್ತದೆ. ತಾನು ಕ್ರಿಸ್ತನನ್ನು ಅನುಸರಿಸುವಂತೆಯೇ (1 ಕೊರಿಂಥ 11:1), ನಾವು ಆತನನ್ನು ಅನುಸರಿಸುವವರಾಗಬೇಕೆಂದು ಬರೆದನು (1 ಕೊರಿಂಥ 4:16; ಫಿಲಿಪ್ಪಿ 3:17). ಆತನು ಫಿಲಿಪ್ಪಿಯವರನ್ನು ಹೀಗೆ ಪ್ರಬೋಧಿಸಿದನು, "ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರರೋ ಮತ್ತು ಯಾವದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ

ಬನ್ನಿರಿ. ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು" (ಫಿಲಿಪ್ಪಿ 4:9). ನಾವು ಸಭೆಗಾಗಿ ಸೇವೆ ಮಾಡುವದಕ್ಕೆ ಮತ್ತು ಸಕಲರನ್ನೂ ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸಲು ಪ್ರಯಾಸ ಪಡುವದಕ್ಕೆ ಮನಸ್ಸುಳ್ಳವರಾಗಿರುವ ಮೂಲಕ ಪೌಲನನ್ನು ಅನುಸರಿಸಬಹುದಾಗಿದೆ.

*ನಾವು ಕ್ರಿಸ್ತನಿಗೋಸ್ಕರ ಸಂಕಷ್ಟಗಳನ್ನು ಸಹಿಸಿಕೊಳ್ಳಲು ಮನಸ್ಸುಳ್ಳವರಾಗಿರಬೇಕು.* ಯೇಸುವು ಅನನೀಯನಿಗೆ ಕಾಣಿಸಿಕೊಂಡ ವೇಳೆಯಲ್ಲಿ, ಆತನ ಹೆಸರಿನ ನಿಮಿತ್ತವಾಗಿ ಪೌಲನು ಎಷ್ಟೊಂದು ಬಾಧೆಯನ್ನು ಅನುಭವಿಸಬೇಕಾಗಿರುತ್ತದೆಂಬ ಬಗ್ಗೆ ಆತನಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 9:16). ಪೌಲನು ತನ್ನ ಸೇವೆಯ ಆರಂಭದಿಂದಲೂ, ಕ್ರಿಸ್ತನ ಸೇವಕನಾಗಿ ತಾನು ಎದುರಿಸಲಿದ್ದ ಸಮಸ್ಯೆಗಳ ಬಗ್ಗೆ ಅರುಹು ಹೊಂದಿದ್ದವನಾಗಿದ್ದನು. ಇದರ ಹೊರತಾಗಿಯೂ, ತಾನು ಅಪೊಸ್ತಲನಾಗಿರುವದಕ್ಕೆ ಕರೆಯಲ್ಪಟ್ಟ ಮೇಲೆ ಆತನು ಯೇಸುವಿಗೆ ವಿಧೇಯನಾಗಿರುವದನ್ನು ಮುಂದುವರೆಸಿದನು (ಅಪೊಸ್ತಲರ ಕೃತ್ಯಗಳು 26:19; ಗಲಾತ್ಯ 1:1).

ಪೌಲನು ಸುವಾರ್ತೆಯನ್ನು ಸಾರುವದರಲ್ಲಿ ಎದುರಿಸಿದ ಕೆಲವೊಂದು ಕಷ್ಟಗಳ ಬಗ್ಗೆ ಸುಳಿವು ನೀಡುತ್ತಾನೆ (2 ಕೊರಿಂಥ 6:4-10; 11:23-28). ಈ ಸಂಕಷ್ಟಗಳ ಸಮಯದಲ್ಲಿ, ಆತನಿಗೆ ಆಂತರ್ಯದಲ್ಲಿ ಹತಾಶೆ, ದುಃಖ, ಮತ್ತು ಎಲ್ಲಾ ಸಭೆಗಳಿಗಾಗಿ ಚಿಂತೆಗಳಂತಹ ಅನೇಕ ತೊಳಲಾಟಗಳಿದ್ದವು. ಆತನು ಕೊರಿಂಥದಲ್ಲಿನ ಕ್ರೈಸ್ತರಿಗೆ ತಾನು ಅವರ ಬಳಿಯಲ್ಲಿ "ಬಲಹೀನನೂ ಭಯಪಡುವವನೂ ಬಹು ನಡುಗುವವನೂ ಆಗಿದ್ದೆನು" ಎಂಬದಾಗಿ ಬರೆಯುವ ಮೂಲಕ ಕೊರಿಂಥದಲ್ಲಿರುವ ವೇಳೆ ತಾನು ಅನುಭವಿಸಿದ ಒತ್ತಡದ ಬಗ್ಗೆ ತಿಳಿಯಪಡಿಸುತ್ತಾನೆ (1 ಕೊರಿಂಥ 2:3). ಪೌಲನ ಕಳವಳವನ್ನು ಗುರುತಿಸಿದವನಾಗಿ, ಯೇಸು ಆತನಿಗೆ ಕೊರಿಂಥದಲ್ಲಿರುವ ವೇಳೆ ಕಾಣಿಸಿಕೊಂಡು ಭಯಪಡದಿರುವಂತೆ ಆತನಿಗೆ ಆದರಣೆಯನ್ನು ನೀಡಿದನು (ಅಪೊಸ್ತಲರ ಕೃತ್ಯಗಳು 18:9, 10). ಆತನು ಕರ್ತನ ಸೇವೆಯನ್ನು ಮಾಡುವವನಾಗುವಂತೆ ಮತ್ತು ಬೇರೆಯವರಿಗೆ ಭಾರವಾಗಿರದಂತೆ ಹಗಲು ರಾತ್ರಿ ಪ್ರಯಾಸ ಪಟ್ಟನು (1 ಥೆಸಲೋನಿಕ 2:9). ನಾವು ಪೌಲನ ಉದಾಹರಣೆಯನ್ನು ಅನುಸರಿಸುವದಾದರೆ, ನಾವು "ಸ್ಥಿರಚಿತ್ತರಾಗಿಯೂ ನಿಶ್ಚಲರಾಗಿಯೂ . . . ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿಯೂ" ಇರುತ್ತೇವೆ (1 ಕೊರಿಂಥ 15:58).

ಕ್ರಿಸ್ತನ ಪ್ರೀತಿ ಮತ್ತು ತ್ಯಾಗಗಳು ಆತನಿಗೋಸ್ಕರ ಜೀವಿಸುವಂತೆ ಪೌಲನನ್ನು ಪ್ರೇರಣೆಗೊಳಿಸಿದವು (ಗಲಾತ್ಯ 2:20). ಒಂದು ವೈಯಕ್ತಿಕವಾದ ಪ್ರೇರಣೆಯ ನಿಮಿತ್ತವಾಗಿ, ತನಗೆ ಸಾಧ್ಯವಾದ ಎಲ್ಲೆಡೆಯೂ ಇರುವ ಪ್ರತಿಯೊಬ್ಬರಿಗೂ ಸುವಾರ್ತೆಯನ್ನು ಸಾರಬೇಕೆಂದು ಋಣ ತನಗಿರುತ್ತದೆಂದು ಭಾವಿಸಿಕೊಂಡನು. ಆತನು ಹೀಗೆ ಬರೆದನು, "ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಅದೆ. ಹೀಗಿರುವದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧನಿದ್ದೇನೆ" (ರೋಮಾ 1:14, 15).

ಋಣ ಮತ್ತು ಕರ್ತವ್ಯ ಎಂಬುವುಗಳು ಕ್ರೈಸ್ತರಿಗಾಗಿ ನಕಾರಾತ್ಮಕ ಪದಗಳಾಗಿರುವದಿಲ್ಲ. ಯೇಸುವು ತನಗೆ ದೇವರ ಚಿತ್ತವನ್ನು ಮಾಡಬೇಕೆಂಬ ಋಣ

ಇದೆಯೆಂದು ಭಾವಿಸಿಕೊಂಡನು, ಯಾಕೆಂದರೆ ಆತನು ತನ್ನ ಚಿತ್ತವನ್ನಲ್ಲ ಆದರೆ ತಂದೆಯ ಚಿತ್ತವನ್ನು ಮಾಡುವದಕ್ಕೆ ಬಂದನು (ಯೋಹಾನ 4:34; 5:30; 6:38). ತಾನು ಕ್ರಿಸ್ತನಿಗೆ ಸೇವೆ ಮಾಡಬೇಕೆಂಬ ಋಣದಲ್ಲಿದ್ದೇನೆಂದು ಪೌಲನು ನಂಬಿದ್ದನು (ರೋಮಾ 1:14; 1 ಕೊರಿಂಥ 9:16). ಯೇಸುವು ಹೊಲದಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಆತನ ಯಜಮಾನನು ಮನೆಯೊಳಗೆ ಬಂದಾಗ ಆತನು ಕಾಯಬೇಕಾದ ಅಗತ್ಯವುಳ್ಳವನಾಗಿದ್ದ ಒಬ್ಬ ಸೇವಕನ ಕುರಿತಾಗಿ ಹೇಳಿದನು. ಈ ಸಾಮ್ಯದಿಂದ ಯೇಸು ಈ ಕೆಳಗಿನ ಅಭಿಪ್ರಾಯಕ್ಕೆ ಬರುತ್ತಾನೆ: "ಇದರಂತೆಯೇ ನಿಮ್ಮ ಸಂಗತಿ. ನೀವು ನಿಮಗೆ ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ ಅನ್ನಿರಿ" (ಲೂಕ 17:10; NKJVಯಲ್ಲಿ "ನಮ್ಮ ಕರ್ತವ್ಯವನ್ನಷ್ಟೆ ಮಾಡಿದ್ದೇವೆ"). ನಾವು ನಮ್ಮ ಕ್ರೈಸ್ತ ಸೇವೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾದ ಮತ್ತು ಯೇಸು ನಮ್ಮಿಂದ ಮಾಡಬೇಕೆಂದು ಬಯಸುವ ಕಾರ್ಯಗಳನ್ನು ಮಾಡುವದರಲ್ಲಿ ಜವಾಬ್ದಾರಿಯುಳ್ಳವರಾಗಿರುವ ಅಗತ್ಯವಿರುತ್ತದೆ.

*ನಾವು ಸಭೆಯ ಸೇವೆಗಾಗಿ ನಮ್ಮನ್ನು ಒಪ್ಪಿಸಿಕೊಳ್ಳತಕ್ಕದ್ದು.* ಕ್ರೈಸ್ತ ಜೀವನದ ಒಂದು ಪ್ರಾಮುಖ್ಯವಾದ ಭಾಗವೆಂದರೆ ಒಬ್ಬರಿಗೊಬ್ಬರು ಸೇವೆ ಮಾಡುವದು (ಗಲಾತ್ಯ 5:13; 1 ಪೇತ್ರ 4:10). ಪೌಲನು ಸಂತೋಷದಿಂದಲೂ ಮನಃಪೂರ್ವಕವಾಗಿಯೂ ಜೊತೆ ಕ್ರೈಸ್ತರಿಗೋಸ್ಕರ ಒಪ್ಪಿಸಿಕೊಂಡಿದ್ದನು. "ನಿಮ್ಮ ನಂಬಿಕೆಯೆಂಬ ಯಜ್ಞವನ್ನು ದೇವರಿಗರ್ಪಿಸುವ ಸೇವೆಯಲ್ಲಿ ನಾನೇ ಪಾನದ್ರವ್ಯವಾಗಿ ಅರ್ಪಿತನಾಗಬೇಕಾದರೂ ನನಗೆ ಸಂತೋಷ, ನಿಮ್ಮೆಲ್ಲರ ಕೂಡ ಸಂತೋಷ" (ಫಿಲಿಪ್ಪಿ 2:17). ಈ ವಿಧದಲ್ಲಿ ಆತನು ಸಭೆಗೋಸ್ಕರ ಯೇಸುವಿನ ಸಂಕಟಗಳಲ್ಲಿ ಉಳಿದದ್ದನ್ನು ಪೂರ್ತಿಗೊಳಿಸುವದಕ್ಕೆ ಪ್ರಯತ್ನಿಸಿದನು (ವ. 24).

ನಾವು ಒಬ್ಬರಿಗೊಬ್ಬರಿಗಾಗಿ ಈ ಕೆಳಗಿನ ಕಾರ್ಯಗಳನ್ನು ಮಾಡಬೇಕೆಂದು ಬೋಧಿಸಲ್ಪಟ್ಟಿರುತ್ತೇವೆ:

ಪರಸ್ಪರ ಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಬೇಕು (ರೋಮಾ 12:10).
ಒಬ್ಬರಿಗೊಬ್ಬರು ಚಿಂತಿಸಬೇಕು (1 ಕೊರಿಂಥ 12:25).
ಒಬ್ಬರಿಗೊಬ್ಬರು ಬುದ್ಧಿಹೇಳಬೇಕು (ಕೊಲೊಸ್ಸೆ 3:16).
ಒಬ್ಬರಿಗೊಬ್ಬರು ಸಂತೈಸಬೇಕು (1 ಥೆಸಲೋನಿಕ 4:18).
ಒಬ್ಬರಿಗೊಬ್ಬರು ಭಕ್ತಿವೃದ್ಧಿಪಡಿಸಬೇಕು (1 ಥೆಸಲೋನಿಕ 5:11).
ಒಬ್ಬರೊಂದಿಗೊಬ್ಬರು ಸಮಾಧಾನದಿಂದ ಬಾಳಬೇಕು (1 ಥೆಸಲೋನಿಕ 5:13).
ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಬೇಕು (ಇಬ್ರಿಯ 3:13).
ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸಬೇಕು (ಇಬ್ರಿಯ 10:24).
ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಬೇಕು (ಯಾಕೋಬ 5:16).
ನಮ್ಮ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡಬೇಕು (1 ಯೋಹಾನ 3:16).

ಒಬ್ಬರನ್ನೊಬ್ಬರು ಪ್ರೀತಿಸಬೇಕು (1 ಯೋಹಾನ 4:7).

ಕ್ರೈಸ್ತರು ಜೊತೆ ಕ್ರೈಸ್ತರ ಕಡೆಗೆ ಜವಾಬ್ದಾರಿಗಳನ್ನು ಹೊಂದಿರುತ್ತಾರೆ. ಪ್ರಶ್ನೆಯು "ಸಭೆಯು ನನಗೋಸ್ಕರ ಏನನ್ನು ಮಾಡಬಲ್ಲದು?" ಎಂದಾಗಿರಕೂಡದು. ಬಹಳಷ್ಟು ಕ್ರೈಸ್ತರಿಗೆ ಈ ರೀತಿಯ ಮನೋಭಾವವು ಇರುತ್ತದೆ. ಪ್ರಶ್ನೆಯು ಏನಾಗಿರಬೇಕೆಂದರೆ, "ನಾನು ಇತತರರಿಗೋಸ್ಕರ ಏನು ಮಾಡುವದಕ್ಕೆ ಶಕ್ತನಾಗಿರುವೆನು?" ಎಂಬದೆ. ಇದು ಯೇಸುವಿಗಿದ್ದ ಮನೋಭಾವ ಆಗಿತ್ತು. "ನಮ್ಮಲ್ಲಿ ಪ್ರತಿಯೊಬ್ಬನು ತನ್ನ ನೆರೆಯವನ ಹಿತವನ್ನೂ ಭಕ್ತಿವೃದ್ಧಿಯನ್ನೂ ಅಪೇಕ್ಷಿಸುವವನಾಗಿ ಅವನ ಸುಖವನ್ನು ನೋಡಿಕೊಳ್ಳಲಿ. ಯಾಕೆಂದರೆ ಕ್ರಿಸ್ತನು ಸಹ ತನ್ನ ಸುಖವನ್ನು ನೋಡಿಕೊಳ್ಳಲಿಲ್ಲ. ದೇವರೇ, ನಿನ್ನನ್ನು ದೂಷಿಸಿದವರ ದೂಷಣೆಗಳನ್ನು ನನ್ನ ಮೇಲೆ ಬಂದವು ಎಂಬದಾಗಿ ಬರೆದಿರುವಂತೆ ಆತನಿಗೆ ಸಂಭವಿಸಿತಲ್ಲಾ" (ರೋಮಾ 15:2, 3).

ಇತರರ ಸೇವೆಯನ್ನು ಮಾಡುವವರೇ ತನ್ನ ಹಿಂಬಾಲಕರಲ್ಲಿ ಅತ್ಯಂಥ ದೊಡ್ಡವರು ಎಂಬದಾಗಿ ಯೇಸು ಕಲಿಸಿದನು (ಮತ್ತಾಯ 20:26; 23:11). ತಾವು ಬೇರೆಯವರ ಸೇವೆ ಮಾಡುವದಕ್ಕೆ ಶಕ್ತರಾಗುವಂತೆ ಎಲ್ಲಾ ಕ್ರೈಸ್ತರು, ಯೇಸುವಿನಂತೆಯೇ ತಮ್ಮನ್ನು ತಗ್ಗಿಸಿಕೊಳ್ಳತಕ್ಕದ್ದು (ಫಿಲಿಪ್ಪಿ 2:6-8). ಯೇಸುವಿನ ಧರ್ಮವು ಸೇವೆಯ ಒಂದು ಧರ್ಮವಾಗಿದೆ.

*ನಾವು ನಮಗೆ ಗೊತ್ತಿರುವ ಪ್ರತಿಯೊಬ್ಬರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯಾಸ ಪಡುತ್ತೇವೆ.* ನಮ್ಮಲ್ಲಿ ಪ್ರತಿಯೊಬ್ಬರಿಗೂ ಒಳ್ಳೇ ಗುಣಗಳಿರುತ್ತವೆ, ಆದರೆ ನಮ್ಮಲ್ಲಿ ಬಲಹೀನತೆಗಳು ಸಹ ಇರುತ್ತವೆ. ಒಂದು ಯೋಗ್ಯವಾದ ಗುರಿಯೆಂದರೆ ಯೇಸುವಿಗೋಸ್ಕರ ನಮ್ಮ ಜೀವಿತಗಳನ್ನು ಸುರಚಿತವಾದ ರೀತಿಯಲ್ಲಿ ಅಭಿವೃದ್ಧಿಪಡಿಸಿಕೊಳ್ಳುವದೇ.

ಕ್ರೈಸ್ತರಾಗಿ, ನಮಗೆ "ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ . . . ತೆಗೆದಿಟ್ಟು" ಇರಬೇಕೆಂದು ಪ್ರೋತ್ಸಾಹಿಸಲ್ಪಟ್ಟಿರುತ್ತೇವೆ (ಇಬ್ರಿಯ 12:1). ನಾವು ಬೆಳವಣಿಗೆಗೊಳ್ಳದ ಶಿಶುಗಳಂತೆ ಇರಬಾರದು, ಆದರೆ ನಾವು ಮೂಲಪಾಠಗಳನ್ನು ದಾಟಿ ಕ್ರಿಸ್ತನಲ್ಲಿ ಪಕ್ವತೆಯನ್ನು ಹೊಂದುವದಕ್ಕೆ ಅಪೇಕ್ಷಿಸತಕ್ಕದ್ದು (ಇಬ್ರಿಯ 5:12-6:1).

ಕೊಲೊಸ್ಸೆ 1:28ರಲ್ಲಿ "ಪ್ರವೀಣರನ್ನಾಗಿ," *teleios*, ಎಂಬುದು ಎಫೆಸ 4:13ರಲ್ಲಿ "ಪರಿಪೂರ್ಣತೆ" ಎಂದು ಅನುವಾದಿಸಲ್ಪಟ್ಟಿರುವ ಗ್ರೀಕ್.ನ ಅದೇ ಪದವಾಗಿರುತ್ತದೆ. ಆ ಪದವು "ಸಂಪೂರ್ಣ" ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ (KJV; NKJV). ಪೌಲನು ಎಲ್ಲಾ ಜನರು ಸಂಪೂರ್ಣತೆಯನ್ನು ಸಾಧಿಸಬೇಕೆಂದು ಬಯಸಿದನು, ಅಂದರೆ ಅವರು ಯೇಸುವಿಗೋಸ್ಕರ ಪ್ರವೀಣರಾಗಿ ಬೆಳವಣಿಗೆಗೊಳ್ಳಬೇಕೆಂಬದೆ (ಎಫೆಸ 4:13). ನಾವು ನಮ್ಮ ಜೀವಿತಗಳಿಗೆ ಎಲ್ಲಾ ಕ್ರೈಸ್ತ ಸದ್ಗುಣಗಳನ್ನು ಸೇರ್ಪಡೆಗೊಳಿಸಿಕೊಳ್ಳಬೇಕು ಮತ್ತು ಯೇಸುವಿಗೋಸ್ಕರ ಸುರಚಿತವಾದ ಜೀವಿತಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ಇತರರಿಗೆ ಸಹಾಯ ಮಾಡುವದಕ್ಕೆ ಪ್ರಯತ್ನಿಸಬೇಕು (ಗಲಾತ್ಯ 5:22, 23; 2 ಪೇತ್ರ 1:5-7). ಈ ವಿಧದಲ್ಲಿ ನಾವು ಕ್ರಿಸ್ತನಲ್ಲಿ ಪ್ರವೀಣರಾಗಬಲ್ಲೆವು.

ನಾವು ಕ್ರಿಸ್ತನಿಗೆ ಹೆಚ್ಚು ಸಮರ್ಪಣೆಯುಳ್ಳವರಾಗಿರುವಂತೆಯೂ ನಮ್ಮ ಜೀವಿತಗಳಲ್ಲಿ ಕ್ರಿಸ್ತನ ಗುಣಗಳನ್ನು ಬೆಳೆಸಿಕೊಳ್ಳುವಂತೆಯೂ ಒಬ್ಬರನ್ನೊಬ್ಬರು ಪ್ರೋತ್ಸಾಹಿಸತಕ್ಕದ್ದು. ಇದರರ್ಥವು ಮತ್ತೊಬ್ಬನು ಪಾಪದ ಜೀವಿತ ನಡಿಸುವದನ್ನು ಖಂಡಿಸುವದು ಮಾತ್ರವಲ್ಲದೆ,

ಯೇಸುವಿನ ಸೇವೆಗಾಗಿ ನಮಗೆ ಸಾಧ್ಯವಾದಷ್ಟು ಉತ್ತಮ ಪ್ರಯಾಸ ಪಡುವಂತೆ ಪ್ರೋತ್ಸಾಹಿಸುವದು ಸಹ ಎಂದಾಗಿರುತ್ತದೆ.

## ಬಾಧೆಯನ್ನನುಭವಿಸುವದರ ಹೊರತಾಗಿಯೂ ಸೇವೆಯನ್ನು ಮಾಡುವದು (1:24-26)

ಪೌಲನ ಮನಸ್ಸಿನಲ್ಲಿ ಯೇಸು ಮತ್ತು ಆತನ ಸಭೆಗೆ ಮೊದಲ ಆದ್ಯತೆಯಿತ್ತು, ಮತ್ತು ಅವರಿಗಾಗಿ ತನ್ನನ್ನು ಮುಕ್ತವಾಗಿ ಒಪ್ಪಿಸಿ ಕೊಡುವದಕ್ಕೆ ಸಿದ್ಧನಿದ್ದನು. ಆತನು ತನ್ನನ್ನು ತ್ಯಾಗವಾಗಿ ಅರ್ಪಿಸಿಕೊಳ್ಳಬೇಕಾಗಿ ಬಂದಾಗ್ಯೂ, ಯೇಸುವಿನ ಸೇವೆ ಮಾಡಬೇಕೆಂದು ಬಯಸಿದನು. ಪೌಲನು ಕ್ರೈಸ್ತರಿಗೆ ಒಂದು ಮಾದರಿ ಆಗಿದ್ದಾನೆ (1 ಕೊರಿಂಥ 11:1). ಆತನ ಜೀವನ ಮತ್ತು ಮಾತುಗಳಿಂದ ನಾವು ಏನನ್ನು ಕಲಿತುಕೊಳ್ಳಬಲ್ಲೆವು?

ಪೌಲನು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರನಾಗಿದ್ದನು (ವ. 24). ಯೇಸು ಕ್ರೈಸ್ತರಿಗೆ ಹಿಂಸೆಯಿಂದ ಸ್ವಾತಂತ್ರ್ಯರು ಎಂಬ ವಾಗ್ದಾನವನ್ನು ಮಾಡಿರುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಆತನಿಗೋಸ್ಕರ ಜೀವಿಸುವವರಿಗೆ ಹಿಂಸೆಯು ವಾಗ್ದಾನ ಮಾಡಲ್ಪಟ್ಟಿದೆ (2 ತಿಮೊಥೆ 3:12). ಈ ಕಾರಣಕ್ಕಾಗಿ, ನಮ್ಮ ವಿರುದ್ಧವಾಗಿ ವಿರೋಧವು ಎದ್ದೇಳುವದನ್ನು ನಾವು ನಿರೀಕ್ಷೆ ಮಾಡಬಹುದಾಗಿದೆ (1 ಪೇತ್ರ 4:12). ಅಂಥ ಸಂದರ್ಭಗಳಲ್ಲಿ, ನಾವು ಶಪಿಸದೆ, ಆಶೀರ್ವದಿಸಬೇಕಾಗಿರುತ್ತದೆ ಮತ್ತು ನಮಗೆ ಕೆಡಕು ಮಾಡುವವರಿಗೋಸ್ಕರ ಪ್ರಾರ್ಥನೆ ಮಾಡಬೇಕಾಗಿರುತ್ತದೆ (ಮತ್ತಾಯ 5:44; ರೋಮಾ 12:14). ಬಾಧೆಯನ್ನು ಸೈರಿಸಿಕೊಳ್ಳುವದಕ್ಕೆ ಯೇಸುವು ಮಾದರಿಯಾಗಿದ್ದಾನೆ (1 ಪೇತ್ರ 2:21).

ಕ್ರಿಸ್ತನ ಹಾಗೆಯೇ, ಪೌಲನ ಸಭೆಯೆಂಬ ದೇಹಕ್ಕೋಸ್ಕರ ಮನಃಪೂರ್ವಕವಾಗಿ ಬಾಧೆಯನ್ನು ಅನುಭವಿಸಿದನು (ವ. 24). ಕ್ರೈಸ್ತರಾಗಿ, ನಾವು ನಮ್ಮ ಮನಸ್ಸುಗಳಲ್ಲಿ ಸಭೆಗೆ ಅತ್ಯಂಥ ಅಗ್ರಗಣ್ಯ ಸ್ಥಾನವನ್ನು ಕೊಡಬೇಕು. ಇದರಲ್ಲಿ ಪ್ರಾರ್ಥನೆಗಳನ್ನು ಮಾಡುವದು, ಬೋಧಿಸುವದಕ್ಕೆ ಪ್ರಯಾಸಗಳು, ಹಣದ ಬಳಕೆ ಮತ್ತು ಜೀವನ ಶೈಲಿಗಳು ಸೇರಿರುತ್ತವೆ. ಯಾವ ಸಮಯದಲ್ಲೇ ಆಗಲಿ ಕ್ರೈಸ್ತನು ಸಭೆಗೆ ದೂಷಣೆಯುಂಟಾಗುವ ರೀತಿಯಲ್ಲಿ ಜೀವಿಸಕೂಡದು. ಕ್ರಿಸ್ತನು ಸಭೆಗೋಸ್ಕರ ತನ್ನನ್ನು ಅರ್ಪಿಸಿಕೊಂಡ ಪ್ರಕಾರವೇ, ನಾವು ಸಹ ನಮ್ಮನ್ನು ಅರ್ಪಿಸಿಕೊಳ್ಳಲು ಮನಸ್ಸುಳ್ಳವರಾಗಿರಬೇಕು (ಎಫೆಸ 5:25; 1 ಯೋಹಾನ 3:16).

ಪೌಲನು ತನ್ನ ಬಾಧೆ ಅನುಭವಿಸುವಿಕೆಯನ್ನು ಮನೆವಾರ್ತೆತನದ ಒಂದು ನಮೂನೆ ಎಂದು ಕಂಡನು (ವ. 25). ತಾನು ಯೇಸುವಿಗೋಸ್ಕರ ದುಡಿಯುತ್ತಿದ್ದಾನೆಂಬುದನ್ನು ಆತನು ಗ್ರಹಿಸಿಕೊಂಡನು. ಆತನು ತನ್ನ ಸಮಯ, ಸ್ವತ್ತುಗಳು, ಮತ್ತು ಪ್ರತಿಭೆಗಳ ವಿಷಯದಲ್ಲಿ ಮನೆವಾರ್ತೆಯವನಾಗಿದ್ದನಷ್ಟೆ. ಕ್ರೈಸ್ತರು ಈ ವಿಧದಲ್ಲಿ ಆಲೋಚಿಸುವದನ್ನು ಕಲಿತುಕೊಳ್ಳಬಹುದು. ನಮ್ಮ ಮನೆಗಳು, ಬ್ಯಾಂಕ್ ಖಾತೆಗಳು, ಮತ್ತು ಸ್ವತ್ತುಗಳು ಯೇಸುವಿಗೇ ಸೇರಿರುತ್ತವೆ. ನಾವು ಏನಾಗಿದ್ದೇವೋ ಮತ್ತು ಏನೆಲ್ಲಾ ಹೊಂದಿದ್ದೇವೋ ಎಲ್ಲವೂ ಆತನದೇ. ನಾವು ನನ್ನ ಆಶೀರ್ವಾದಗಳನ್ನು, ನಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ಯೇಸುವಿಗೋಸ್ಕರ ಬಳಸಬೇಕು.

ಕೆಲವು ಕ್ರೈಸ್ತರು ವಾರದ ಮೊದಲ ದಿನದಂದು ಕಾಣಿಕೆಯು ಎತ್ತಲ್ಪಡುವಾಗ ಸ್ವಲ್ಪ ಹಣವನ್ನು ಕೊಟ್ಟ ಬಳಿಕ ಮಿಕ್ಕದ್ದೆಲ್ಲವೂ ಅವರಿಗೆ ಸೇರಿದ್ದು ಅವರಿಷ್ಟದಂತೆ ಬಳಸಿಕೊಳ್ಳಬಹುದೆಂದು ಯೋಚಿಸುವಂತೆ ತೋರುತ್ತದೆ. ದೇವರು ನಾವು ಕೊಡುವ

ಕಾಣಿಕೆಗಳನ್ನು ಮಾತ್ರ ನೋಡುವದಿಲ್ಲ, ಆದರೆ ಒಬ್ಬನು ತನಗಿರುವದನ್ನೆಲ್ಲಾ ಹೇಗೆ ಉಪಯೋಗಿಸುತ್ತಾನೆಂಬುದನ್ನು ಸಹ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾನೆ.

## ಇತರರನ್ನು ರಕ್ಷಣೆಗೆ ನಡಿಸುವದು (1:26-28)

ಪೌಲನು ಮರ್ಮವೊಂದನ್ನು ತಿಳಿಯಪಡಿಸುವದಕ್ಕೆ ಪ್ರಯಾಸ ಪಟ್ಟನು (ವಚನಗಳು 26, 27). ಹಳೆಯ ಒಡಂಬಡಿಕೆಯ ಅಡಿಯಲ್ಲಿ, ದೇವರ ರಕ್ಷಣಾಯೋಜನೆಯು ಅಜ್ಞಾತವಾಗಿತ್ತು. ಹೊಸ ಒಡಂಬಡಿಕೆಯು ಪ್ರಕಟಗೊಳ್ಳುವ ತನಕ ಅದು ಮರ್ಮವಾಗಿಯೇ ಉಳಿದಿತ್ತು (ಎಫೆಸ 3:3-5). ದೇವರ ರಕ್ಷಿಸುವ ಮತ್ತು ಮಾನವರೆಲ್ಲರನ್ನು ಒಗ್ಗೂಡಿಸುವ ಯೋಜನೆಯ ಬಗ್ಗೆ ಬೇರೆಯವರಿಗೆ ತಿಳಿಯುವಂತೆ ಸಹಾಯ ಮಾಡುವದೇ ಪೌಲನ ಕೆಲಸವಾಗಿತ್ತು. ಪ್ರತಿಯೊಬ್ಬ ಕ್ರೈಸ್ತರಿಗಾಗಿ ಇರುವ ಗುರಿಯು ಇದೇ ಆಗಿದೆ. ಈ ದಿನ ಸಹ, ರಕ್ಷಣೆಗೆ ಅಗತ್ಯವಾದವುಗಳು ಏನೆಂಬುದನ್ನು ಅರ್ಥಮಾಡಿಕೊಳ್ಳದವರಿಗೆ ಬೈಬಲ್ ಒಂದು ಮರ್ಮವಾಗಿಯೇ ಉಳಿದಿರುತ್ತದೆ. ದೇವರು ರಕ್ಷಣೆಗಾಗಿ ಏನನ್ನು ಅಪೇಕ್ಷಿಸುತ್ತಾನೆಂಬುದನ್ನು ತಿಳಿದುಕೊಳ್ಳುವಂತೆ ಕ್ರಿಸ್ತನ ಹಿಂಬಾಲಕರು ಇತರರಿಗೆ ಸಹಾಯ ಮಾಡಬೇಕಾಗಿತ್ತದೆ.

ಅಷ್ಟು ಮಾತ್ರವಲ್ಲದೆ, ಪೌಲನ ಗುರಿಯು ಇತರರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ಮಾಡುವದಾಗಿತ್ತು (ವ. 28). ಜನರನ್ನು ಕ್ರೈಸ್ತ ಜೀವಿತವನ್ನು ಆರಂಭಿಸುವಂತೆ ನಡಿಸುವದಷ್ಟೆ ಪೌಲನ ಉದ್ದೇಶವಾಗಿರಲಿಲ್ಲ, ಆದರೆ ಕ್ರಿಸ್ತನ ನಂಬಿಗಸ್ತರಾದ ಹಿಂಬಾಲಕರ ಗುಣಗಳನ್ನು ಬೆಳೆಸಿಕೊಂಡು, ಪರಿಪಕ್ವವುಳ್ಳ ಕ್ರೈಸ್ತರಾಗುವಂತೆ ಅವರಿಗೆ ಸಹಾಯವನ್ನು ಒದಗಿಸುವದು ಸಹ ಆಗಿತ್ತು. ಕ್ರೈಸ್ತನಿಗಿರುವ ಆದೇಶವು ಯೇಸುವಿನ ಸಾರೂಪ್ಯವುಳ್ಳವರಾಗುವಂತೆ ಇತರರಿಗೆ ಪ್ರೋತ್ಸಾಹ ಮಾಡುವದೇ ಆಗಿರುತ್ತದೆ. ಇದು ವಿಶೇಷವಾಗಿ, ದೇವಜನರನ್ನು ಪಕ್ವಗೊಳ್ಳುವಂತೆ ಸನ್ನದ್ಧುಗೊಳಿಸುವ ಮತ್ತು ಸಹಾಯ ಮಾಡುವದಕ್ಕೆ ನೇಮಿಸಲಾಗಿರುವ ಕರ್ತನ ಸಭೆಯ ನಾಯಕರ ಜವಾಬ್ದಾರಿಯಾಗಿರುತ್ತದೆ (ಎಫೆಸ 4:11-13). ಕ್ರಿಸ್ತನಲ್ಲಿ ಪ್ರವೀಣರಾಗುವದಕ್ಕೆ ಇರುವ ದಾರಿಯೆಂದರೆ ಆತನಲ್ಲಿರುವಂಥ ಆತ್ಮೀಕ ಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳುವದೇ.

## ಇತರರ ಸೇವೆ ಮಾಡುವದು (1:29)

ಕ್ರಿಸ್ತನಿಗೆ ಮಾಡುವ ಸೇವೆಯಲ್ಲಿ ಇತರರ ಸೇವೆ ಮಾಡುವದು ಸೇರಿರುತ್ತದೆ, ಯೇಸು ಮತ್ತು ಪೌಲ ಸಹ ಬೇರೆಯವರ ಸೇವೆಯನ್ನು ಮಾಡಿದರು. ಕಡೇ ರಾತ್ರಿ ಭೋಜನದ ಬಳಿಕ, ಅಪೊಸ್ತಲರು ತಮ್ಮೊಳಗೆ ಯಾರು ಎಲ್ಲರಿಗಿಂತ ದೊಡ್ಡವರು ಎಂಬ ವಿಷಯದಲ್ಲಿ ವಾಗ್ವಾದ ನಡಿಸಿದ್ದರು (ಲೂಕ 22:24-27). ಯೇಸು ಅವರಿಗೆ ಸೇವೆ ಮಾಡುವವನೇ ಎಲ್ಲರಿಗಿಂತ ದೊಡ್ಡವನು ಎಂಬದನ್ನು ಕಲಿಸುವದಕ್ಕಾಗಿ ಯೇಸು ಒಂದು ಮಾದರಿಯನ್ನು ತೋರಿಸಿದನು (ಯೋಹಾನ 13:1-15). ಒಬ್ಬ ದಾಸನ ಕೆಲಸವನ್ನು ಮಾಡುವದಕ್ಕೆ ತನ್ನನ್ನು ತಗ್ಗಿಸಿಕೊಂಡು, ಆತನು ಅಪೊಸ್ತಲರ ಪಾದಗಳನ್ನು ತೊಳೆದನು. ಯಾರು ಏಕ ಮನಸ್ಸಿನಿಂದ ಯೇಸುವಿನ ಮತ್ತು ಇತರರ ಸೇವೆಯನ್ನು ಮಾಡುವವರೇ ಆತನ ಅತ್ಯಂಥ ದೊಡ್ಡ ಶಿಷ್ಯರಾಗಿರುತ್ತಾರೆ.

ಪೌಲನು ತಾನು ಪಟ್ಟ ಪ್ರಯಾಸಗಳನ್ನು ವರ್ಣಿಸುತ್ತಾನೆ (ವ. 29). ಆತನು ಬೇರೆವರಿಗಿಂತಲೂ ಅಧಿಕ ಪ್ರಯಾಸ ಪಟ್ಟನು ಮತ್ತು ಅಧಿಕವಾದ ಸಂಕಟಗಳನ್ನು ಅನುಭವಿಸಿದನು (1 ಕೊರಿಂಥ 15:10; 2 ಕೊರಿಂಥ 11:23-28). ಆತನು ಸನ್ನಿಹಿತವಾಗಿದ್ದ

ನ್ಯಾಯತೀರ್ಪು, ಕರ್ತನ ಭಯ, ಕ್ರಿಸ್ತನ ಮೇಲಿದ್ದ ಪ್ರೀತಿ, ಮತ್ತು ಯೇಸು ಆತನಿಗೋಸ್ಕರ ಮರಣಿಸಿದನು ಎಂಬ ವಾಸ್ತವಾಂಶದ ಕಾರಣದಿಂದ ಕ್ರಿಸ್ತನನ್ನು ಮೆಚ್ಚಿಸಬೇಕೆಂಬ ಬಯಕೆಯಿಂದ ಪ್ರೇರಣೆಗೊಂಡಿದ್ದನು (2 ಕೊರಿಂಥ 5:14, 15; ಗಲಾತ್ಯ 2:20). ಪೌಲನಿಗೆ ಸಮರ್ಪಣೆಯಿಂದ ಸೇವೆ ಮಾಡುವಂತೆ ಮಾಡಿದ್ದೇನು ಎಂಬದನ್ನು ಪರಿಗಣಿಸುವ ಮೂಲಕ, ತನ್ನ ಸೇವೆಯ ವಿಶೇಷ ಸ್ಥಾನವನ್ನು ನೆರವೇರಿಸುವಂತೆ ಪ್ರತಿಯೊಬ್ಬ ಕ್ರೈಸ್ತನಿಗೆ ಪ್ರೇರಕವಾಗುವದು (ರೋಮಾ 12:6–8).

### ದೇವರ ಬಲದ ಮೂಲಕ ಸೇವೆ ಮಾಡುವದು (1:29)

ದೇವರು ಪೌಲನ ಮೂಲಕ ಕಾರ್ಯ ಮಾಡುತ್ತಿದ್ದನು (1:29). ದೇವರೇ ಎಲ್ಲಾ ಕೆಲಸವನ್ನು ಮಾಡುವದಾಗಿದ್ದಲ್ಲಿ, ಮಾನವ ಮಧ್ಯವರ್ತಿಯ ಅಗತ್ಯತೆ ಇದ್ದಿರುತ್ತಿದ್ದಿಲ್ಲ. ಹೇಗೂ, ದೇವರು ಮಹಿಮಾತಿಶವಾದ ಸುವಾರ್ತೆಯನ್ನು ಕ್ರೈಸ್ತರ ಕೈಗಳಲ್ಲಿ ಇಟ್ಟಿದ್ದಾನೆ (2 ಕೊರಿಂಥ 4:7). ನಾವು ಸಾಧನಗಳಾಗಿದ್ದು ನಮ್ಮ ಮೂಲಕ ಆತನು ಇತರರಿಗೆ ಸೇವೆಯನ್ನು ಮಾಡುತ್ತಾನೆ ಮತ್ತು ತನ್ನ ವಾಕ್ಯವನ್ನು ಪ್ರಸಾರಣೆ ಮಾಡುತ್ತಾನೆ (1 ಕೊರಿಂಥ 3:5–9). ಕ್ರೈಸ್ತರಿಗೆ ಯೇಸು ಕೊಟ್ಟಿರುವ ಚಲನಾದೇಶವು ಆತನ ಸಂದೇಶವನ್ನು ಲೋಕದ ಎಲ್ಲಾ ಕಡೆಗೂ ಕೊಂಡೊಯ್ಯುವದೇ ಆಗಿರುತ್ತದೆ (ಮತ್ತಾಯ 28:19; ಮಾರ್ಕ 16:15, 16). ಆತನು ತನಗೆ ವಿಧೇಯರಾಗುವದಕ್ಕೆ ಮನಸ್ಸುಳ್ಳವರನ್ನು ಬಲಪಡಿಸುತ್ತಾನೆ (ಫಿಲಿಪ್ಪಿ 4:13). ಕ್ರೈಸ್ತರು ಯೇಸುವಿಗೆ ಸೇವೆ ಮಾಡಲು ಸಿಕ್ಕುವ ಪ್ರತಿಯೊಂದು ಅವಕಾಶವನ್ನು ಗಂಭೀರವಾಗಿ ತೆಗೆದುಕೊಳ್ಳತಕ್ಕದ್ದು. ಆತನು ತಾನು ಆರಂಭಿಸಿದ, ಕೆಟ್ಟುಹೋಗಿರುವವರನ್ನು ಹುಡುಕಿ ರಕ್ಷಿಸುವ ಮಹಾ ಕೆಲಸವನ್ನು, ಪೂರ್ತಿಗೊಳಿಸುವದಕ್ಕಾಗಿ ತನ್ನ ಹಿಂಬಾಲಕರನ್ನು ಅವಲಂಭಿಸಿಕೊಂಡು ಇರುತ್ತಾನೆ.

---

### ಅಡಿಟಿಪ್ಪಣಿಗಳು

[1]William Hendriksen, *Exposition of Colossians and Philemon*, New Testament Commentary (Grand Rapids, Mich.: Baker Book House, 1964), 86. [2]H. C. G. Moule, *The Epistles to the Colossians and to Philemon*, The Cambridge Bible for Schools and Colleges (Cambridge: University Press, 1893; reprint, 1902), 90. [3]Eduard Schweizer, *The Letter to the Colossians: A Commentary*, trans. Andrew Chester (Zürich: Benziger Verlag, 1976; reprint, Minneapolis: Augsburg Publishing House, 1982), 105–6. [4]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 230. [5]ನೋಡಿರಿ ರೋಮಾ 1:1; 1 ಕೊರಿಂಥ 1:1; 2 ಕೊರಿಂಥ 1:1; ಗಲಾತ್ಯ 1:1; ಕೊಲೊಸ್ಸೆ 1:1; 1 ತಿಮೊಥೆ 1:1; 2 ತಿಮೊಥೆ 1:1. [6]ನೋಡಿರಿ ಅಪೊಸ್ತಲರ ಕೃತ್ಯಗಳು 13:46; 14:25; 15:35, 36; 16:32; 17:13; 18:5, 11; 1 ಕೊರಿಂಥ 15:2; ಫಿಲಿಪ್ಪಿ 1:14; 1 ಥೆಸಲೋನಿಕ 2:13. [7]J. B. Lightfoot, *St. Paul's Epistles to the Colossians and to Philemon*, rev. (London: Macmillan & Co., 1916), 166. [8]ನೋಡಿರಿ ರೋಮಾ 11:25; 16:25; 1 ಕೊರಿಂಥ 2:7; 4:1; ಎಫೆಸ 1:9; 3:3–11; ಕೊಲೊಸ್ಸೆ 1:27; 4:3. [9]ನೋಡಿರಿ ಆದಿಕಾಂಡ 22:18; 26:4; 28:14; 49:10; ಕೀರ್ತನೆ 72:8; ಯೆಶಾಯ 2:2, 3; 54:2, 3; 60:1–3; ಮೀಕ 4:1, 2; ಮಲಾಕಿ 1:11. [10]1 ಕೊರಿಂಥ 2:6; 14:20; ಎಫೆಸ 4:13; ಇಬ್ರಿಯ 5:14. ಅದು ಮತ್ತಾಯ 5:48; ರೋಮಾ 12:2; 1 ಕೊರಿಂಥ 13:10; ಫಿಲಿಪ್ಪಿ 3:15; ಕೊಲೊಸ್ಸೆ 4:12;

ಇಬ್ರಿಯ 9:11; ಯಾಕೋಬ 1:4, 17, 25; 3:2; 1 ಯೋಹಾನ 4:18ರಲ್ಲಿ “ದೋಷವಿಲ್ಲದವರು” ಎಂದು ಅನುವಾದಿಸಲ್ಪಟ್ಟಿದೆ.